ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಆಗಸ್ಟ್ 08, 2024

ಸಂಪುಟ : 51 ಸಂಚಿಕೆ : 86 ☎ 08192-254736 91642 99999 RNI No: 27369 ಪುಟ : 4 ರೂ : 5.00 www.janathavani.com janathavani@mac.com

## 2 ಎಕರೆ ಜಾಗ ಒದಗಿಸಿದಲ್ಲಿ ದಾವಣಗೆರೆಗೆ ಐ.ಟಿ. ಪಾರ್ಕ್

### ಸಂಸದೆ ಡಾ. ಪ್ರಭಾ ಪ್ರಶ್ನೆಗೆ ಸಚಿವ ಜಿತಿನ್ ಭರವಸೆ




ನವದೆಹಲಿ, ಆ. 7 - ದಾವಣಗೆರೆ ನಗರದಲ್ಲಿ 2 ಎಕರೆ ಜಾಗ ಹಾಗೂ 50 ಸಾವಿರ ಚದುರ ಅಡಿ ಪ್ರದೇಶದ ಕಟ್ಟಡ ಒದಗಿಸಿದಲ್ಲಿ ಐ.ಟಿ. ಪಾರ್ಕ್ ಸ್ಥಾಪಿಸಲು ಪರಿಶೀಲಿಸಲಾಗುವುದು ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಜಿತಿನ್ ಪ್ರಸಾದ್ ಭರವಸೆ ನೀಡಿದ್ದಾರೆ.

ಲೋಕಸಭೆಯಲ್ಲಿ ದಾವಣಗೆರೆ ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ದಾವಣಗೆರೆಯಲ್ಲಿ ಈಗಾಗಲೇ ಎಸ್.ಟಿ.ಪಿ.ಐ. (ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ) ಉಪ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಇದು 10 ಸಾವಿರ ಚದರಡಿ ಜಾಗ ಹೊಂದಿದೆ ಎಂದು ಹೇಳಿದರು.

ರಾಜ್ಯ ಸರ್ಕಾರ 2 ಎಕರೆ ಪ್ರದೇಶ ಹಾಗೂ 50 ಸಾವಿರ ಚದುರ ಅಡಿ ಜಾಗದ ಕಟ್ಟಡ ಒದಗಿಸಿದರೆ ಮಾತ್ರ ಐ.ಟಿ. ಪಾರ್ಕ್ ಸ್ಥಾಪಿಸಬೇಕು ಎಂಬುದು ಕೇಂದ್ರ ಸರ್ಕಾರದ ಈಗಿರುವ ನೀತಿಯಾಗಿದೆ ಎಂದವರು ಹೇಳಿದರು.

ದಾವಣಗೆರೆಯಲ್ಲಿ ಈಗಿರುವ ಎಸ್.ಟಿ.ಪಿ.ಐ. ಉಪ ಕೇಂದ್ರದಲ್ಲಿ ಆರು ಕಂಪನಿಗಳು ಕಾರ್ಯ ನಿರ್ವಹಿಸುತ್ತಿವೆ. ಇದರಲ್ಲಿ ಒಂದು ರಫ್ತು ಆಧರಿತ ಕಂಪನಿಯಾಗಿದೆ ಎಂದು ಸಚಿವರು ಹೇಳಿದರು.

ಹೊಸ ಐ.ಟಿ. ಹಬ್‌ಗಳಿಗೆ ಉತ್ತೇಜಿಸುವ ನೀತಿಯನ್ನು ಕೇಂದ್ರ ಸರ್ಕಾರ ಹೊಂದಿದೆ. ರಾಜ್ಯಗಳೂ ಸಹ ಮೂಲಭೂತ ಸೌಲಭ್ಯ ಹಾಗೂ ಸಂಪರ್ಕ ವ್ಯವಸ್ಥೆಗಳನ್ನು ಕಲ್ಪಿಸಬೇಕಿದೆ ಎಂದು ತಿಳಿಸಿದರು.

ನವೋದ್ಯಮಿಗಳಿಗೆ ಮುಂದಿನ ಪೀಳಿಗೆಯ ಇನ್‌ಕ್ಯುಬೇಷನ್ ಕೇಂದ್ರಗಳನ್ನು ಒದಗಿಸಲು ಕೇಂದ್ರ ಸರ್ಕಾರ ಯೋಜನೆ ಹೊಂದಿದೆ. ಇದರ ಅನ್ವಯ ಟಿ.ಐ.ಡಿ.ಇ. (2ನೇ ಪುಟಕ್ಕೆ)

## ದಾವಣಗೆರೆ-ಚಿತ್ರದುರ್ಗ-ತುಮಕೂರು ರೈಲ್ವೆ ಯೋಜನೆಗೆ 150 ಕೋಟಿ ರೂ.

### ಲಭ್ಯವಿರುವ ಜಾಗದಲ್ಲಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ ಎಂದು ಸಚಿವ ವೈಷ್ಣವ್ ಮಾಹಿತಿ

ನವದೆಹಲಿ, ಆ. 7 – ದಾವಣಗೆರೆ - ಚಿತ್ರದುರ್ಗ – ತುಮಕೂರು ನೇರ ರೈಲ್ವೆ ಮಾರ್ಗ ಯೋಜನೆಯ ಇತ್ತೀಚಿನ ಅಂದಾಜು ವೆಚ್ಚ 2,142.35 ಕೋಟಿ ರೂ. ಆಗಿದೆ. ಕಳೆದ ಮಾರ್ಚ್ 2024ರವರೆಗೆ 359.32 ಕೋಟಿ ರೂ.ಗಳ ವೆಚ್ಚ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಲೋಕಸಭೆಯಲ್ಲಿ ದಾವಣಗೆರೆ ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಹಾಗೂ ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಕೇಳಿದ ಪ್ರಶ್ನೆಗೆ ಈ ಮಾಹಿತಿ ನೀಡಲಾಗಿದೆ.

ಈ ಬಗ್ಗೆ ಉತ್ತರ ನೀಡಿರುವ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಯೋಜನೆಗಾಗಿ ರಾಜ್ಯ ಸರ್ಕಾರವು ಉಚಿತವಾಗಿ ಜಮೀನು ನೀಡಬೇಕಿದೆ ಹಾಗೂ ನಿರ್ಮಾಣ ವೆಚ್ಚದ ಶೇ.50ರಷ್ಟನ್ನು ಹಂಚಿಕೊಳ್ಳಬೇಕಿದೆ ಎಂದು ಹೇಳಿದರು.

ಈ ಯೋಜನೆಗಾಗಿ (2ನೇ ಪುಟಕ್ಕೆ)

## ದುಬಾರಿ ಮದ್ಯಗಳ ಬೆಲೆ ಇಳಿಕೆ

### ರಾಜ್ಯ ಸರ್ಕಾರದ ತೀರ್ಮಾನ

ಬೆಂಗಳೂರು, ಆ. 7 - ಪೆಟ್ರೋಲ್, ಡೀಸೆಲ್, ಹಾಲಿನ ದರ ಹೆಚ್ಚಿಸಿದ ಸರ್ಕಾರ ಮದ್ಯ ಬೆಲೆಗಳನ್ನು ಇಳಿಕೆ ಮಾಡಲು ನಿರ್ಧರಿಸಿದೆ. ದರ ಇಳಿಕೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಆರ್ಥಿಕ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಿ, ಮೇಲ್ವರ್ಗದವರು ಹೆಚ್ಚು ಸೇವಿಸುವ ಮದ್ಯಗಳ ಬೆಲೆ ಇಳಿಕೆಗೆ ತೀರ್ಮಾನಿಸಿದ್ದಾರೆ.

ಬೆಲೆ ಇಳಿಕೆಯಿಂದ ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಆದಾಯ ನಿರೀಕ್ಷಿಸಿರುವ ಮುಖ್ಯಮಂತ್ರಿ ಅವರು, ಸೆಕೆಂಡ್ಸ್ ಹಾವಳಿಯನ್ನು ಒಂದಷ್ಟು ಪ್ರಮಾಣದಲ್ಲಿ ತಡೆಗಟ್ಟಬಹುದೆಂಬ ತೀರ್ಮಾನಕ್ಕೆ ಬಂದಿದ್ದಾರೆ. (2ನೇ ಪುಟಕ್ಕೆ)

## ಹಣಕಾಸು ಮಸೂದೆಗೆ ಲೋಕಸಭೆ ಅಂಗೀಕಾರ

ನವದೆಹಲಿ, ಆ. 7 - ಲೋಕಸಭೆ 2024ರ ಹಣಕಾಸು ಮಸೂದೆಗೆ ಅಂಗೀಕಾರ ನೀಡಿದೆ. ನೂತನ ಬಂಡವಾಳ ಲಾಭಕ್ಕೆ ತೆರಿಗೆ ವಿನಾಯಿತಿ ನೀಡಿದ ನಂತರ ಹಣಕಾಸು ಮಸೂದೆ ಅಂಗೀಕಾರ ಪಡೆದುಕೊಂಡಿದೆ

ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಅವರು ಬಜೆಟ್ ಮಂಡಿಸುವಾಗ ರಿಯಲ್ ಎಸ್ಟೇಟ್ ಮೇಲಿನ ದೀರ್ಘಾವಧಿ ಬಂಡವಾಳ (2ನೇ ಪುಟಕ್ಕೆ)

## ರಾಷ್ಟ್ರೀಯ ವಿಪತ್ತು ನಿಧಿ ಕರ್ನಾಟಕಕ್ಕೆ ಹೆಚ್ಚು ನೆರವು

ನವದೆಹಲಿ, ಆ. 7 - ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ ಕಳೆದ ಎರಡು ವರ್ಷಗಳಲ್ಲಿ ಕರ್ನಾಟಕ, ಹಿಮಾಚಲ ಪ್ರದೇಶ ಹಾಗೂ ಅಸ್ಸಾಂಗಳಿಗೆ ಅತಿ ಹೆಚ್ಚು ನೆರವು ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ರಾಜ್ಯಸಭೆಗೆ ತಿಳಿಸಿದೆ.

ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು ಹೇಳಿಕೆ ನೀಡಿದ್ದು, 2022-24ರಲ್ಲಿ ಕರ್ನಾಟಕಕ್ಕೆ 939 ಕೋಟಿ ರೂ. ಹಿಮಾಚಲ ಪ್ರದೇಶಕ್ಕೆ 812 ಕೋಟಿ ರೂ. ಹಾಗೂ ಅಸ್ಸಾಂಗೆ 160 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದು ಹೇಳಿದರು.

# ಮೈಸೂರಲ್ಲಿ ಸಿದ್ದು ಶಕ್ತಿ-ಸಂದೇಶ

## ಬಿಜೆಪಿ-ಜೆಡಿಎಸ್ ಪಾದಯಾತ್ರೆಗೆ ಸಿದ್ಧರಾಮಯ್ಯ ಪ್ರತಿತಂತ್ರ

### ಬಿಜೆಪಿ-ಜೆಡಿಎಸ್ ಪಾದಯಾತ್ರೆ ಮೈಸೂರಿಗೆ ಬರುವ ಮುನ್ನವೇ ಸಿದ್ಧರಾಮಯ್ಯ ಅವರಿಂದ ಶಕ್ತಿ ಹಾಗೂ ಸತ್ಯ ಸಂದೇಶ ತಾರುವ ಸಮಾವೇಶ ಹಮ್ಮಿಕೊಳ್ಳಲಾಗಿದೆ



ಬೆಂಗಳೂರು, ಆ. 7 - ದೇವರಾಜ ಅರಸು ಅವರನ್ನು ಅಧಿಕಾರದಿಂದ ಕೆಳಗಿಳಿಸಿದ ರೀತಿಯಲ್ಲೇ ಸಿದ್ದರಾಮಯ್ಯ ಅವರನ್ನೂ ಮುಖ್ಯಮಂತ್ರಿ ಸ್ಥಾನದಿಂದ ಪದಚ್ಯುತಗೊಳಿಸಲು ಸಂಚು ನಡೆಸಲಾಗುತ್ತಿದೆ ಎಂದು ಆರೋಪಿಸಿ ಮೈಸೂರಿನಲ್ಲಿ ಇದೇ ಶುಕ್ರವಾರ ಸಿದ್ದರಾಮಯ್ಯ ಬೆಂಬಲಿಗರು ಬೃಹತ್ ಜನಾಂದೋಲನ ಸಭೆ ನಡೆಸಲಿದ್ದಾರೆ.

ರಾಜ್ಯದ ಮೂಲೆ ಮೂಲೆಗಳಿಂದ ಪ್ರತಿಭಟನಾ ಸಭೆಗೆ ಹಾಜರಾಗಿ ಕೋಮು ಶಕ್ತಿಗಳ ವಿರುದ್ಧ ಬಲ ಪ್ರದರ್ಶಿಸೋಣ ಎಂದು ಕರೆ ನೀಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮುಡಾದಲ್ಲಿ ತಮ್ಮ ಕುಟುಂಬದವರಿಗೆ 14 ನಿವೇಶನಗಳನ್ನು ಪಡೆದಿದ್ದಾರೆ ಎಂಬುದೂ ಸೇರಿದಂತೆ, ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ವಿರೋಧಿಸಿ ಹಾಗೂ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ, ಬಿಜೆಪಿ ಮತ್ತು ಜೆಡಿಎಸ್ ಬೆಂಗಳೂರು-ಮೈಸೂರು ಪಾದಯಾತ್ರೆ ನಡೆಸುತ್ತಿರುವವರ ವಿರುದ್ಧ ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಆಗಸ್ಟ್ 3ರಿಂದ ಆರಂಭಗೊಂಡಿರುವ ಬಿಜೆಪಿ-ಜೆಡಿಎಸ್ ಪಾದಯಾತ್ರೆ 9ಕ್ಕೆ ಅಂತ್ಯಗೊಂಡು ಆಗಸ್ಟ್ 10ರ ಶನಿವಾರದಂದು ಎನ್‌ಡಿಎ ಮೈತ್ರಿ ಕೂಟ ಮೈಸೂರಿನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ. ಇದಕ್ಕೂ ಮುನ್ನವೇ ಆಗಸ್ಟ್ 9ರಂದು ಮೈಸೂರಿನ ಮಹಾರಾಜ ಕಾಲೇಜ್ ಆವರಣದಲ್ಲಿ ಶಕ್ತಿ ಹಾಗೂ ಸತ್ಯ ಸಂದೇಶ ಸಾರುವ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ತಮ್ಮ ಅಭಿಮಾನಿಗಳು (3ನೇ ಪುಟಕ್ಕೆ)

## ಸಹಾಯಕ ಪ್ರಾಧ್ಯಾಪಕ, ನರ್ಸ್ ನೇಮಕಕ್ಕೆ ಸೂಚನೆ

ಬೆಂಗಳೂರು, ಆ. 7 - ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಬರುವ 'ಗ್ರೂಪ್-ಎ'ನ 650 ಸಹಾಯಕ ಪ್ರಾಧ್ಯಾಪಕರು ಮತ್ತು 1,200 ನರ್ಸ್‌ಗಳನ್ನು (ದಾದಿಯರು) ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನೇಮಕ ಮಾಡಿಕೊಳ್ಳುವಂತೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಅಧಿಕಾರಿಗಳಿಗೆ ಇಂದಿಲ್ಲಿ ಸೂಚಿಸಿದ್ದಾರೆ.

ವೈದ್ಯಕೀಯ ಶಿಕ್ಷಣ ಇಲಾಖೆ ಅಧಿಕಾರಿಗಳ ಸಭೆ ನಡೆಸಿದ ಅವರು, ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳುವ ಉದ್ದೇಶದಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕವೇ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವಂತೆ ಸ್ಪಷ್ಟ ನಿರ್ದೇಶನ ನೀಡಿದ್ದಾರೆ.

ಸಹಾಯಕ ಪ್ರಾಧ್ಯಾಪಕರು ಹಾಗೂ ನರ್ಸ್‌ಗಳ ನೇಮಕಾತಿಯಲ್ಲಿ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತ ಆರೋಪ ಬಂದ ಹಿನ್ನೆಲೆಯಲ್ಲಿ ಈ ಬಾರಿ ಗ್ರೂಪ್-ಎ ಮತ್ತು ದಾದಿಯರ ನೇಮಕಾತಿಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕವೇ ನಡೆಸಬೇಕು ಎಂದು ನಿರ್ದೇಶನ ನೀಡಿದರು.

ವೈದ್ಯಕೀಯ ಶಿಕ್ಷಣ ಇಲಾಖೆಯಡಿ ರಾಜ್ಯದಲ್ಲಿ 22 ವೈದ್ಯಕೀಯ ಕಾಲೇಜುಗಳು ಮತ್ತು 11 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಇದ್ದು, ನಿಯಮದಂತೆ ಯಾವುದೇ ಮುಲಾಜಿಗೆ ಒಳಗಾಗದೇ (2ನೇ ಪುಟಕ್ಕೆ)

### ಸಿದ್ಧಲಿಂಗೇಶ್ವರ ಬಿ.ಇ. ನಿಧನ



ದಾವಣಗೆರೆ, ನಿಟ್ಟುವಳ್ಳಿಯ ಸಿದ್ಧಗಂಗಾ ಸ್ಕೂಲ್ ಹಿಂಭಾಗದ ವಾಸಿ ಈರಪ್ಪ ಭದ್ರಣ್ಣನವರ ಕಿರಿಯ ಪುತ್ರ

**ಶ್ರೀ ಸಿದ್ಧಲಿಂಗೇಶ್ವರ ಬಿ.ಇ.**

ಇವರು ದಿನಾಂಕ 07.08.2024ರ ಬುಧವಾರ ಮಧ್ಯಾಹ್ನ 12.50ಕ್ಕೆ ನಿಧನರಾದರು. ಮೃತರಿಗೆ 48 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 08.08.2024ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಬೂದಾಳ್ ರೋಡ್ (ಗಾಂಧಿನಗರ) ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತ ಕುಟುಂಬ ವರ್ಗ :
80733 45456, 94486 66526

## ಒಲಂಪಿಕ್‌ನಲ್ಲಿ ತೀವ್ರ ನಿರಾಸೆ

### 100 ಗ್ರಾಂ ತೂಕದಿಂದ ವಿನೇಶ್ ಅನರ್ಹ

ನವದೆಹಲಿ, ಆ. 7 - ಪ್ಯಾರಿಸ್ ಒಲಂಪಿಕ್ ಪಂದ್ಯಾವಳಿಯಲ್ಲಿ ಬಂಗಾರದ ಪದಕದ ಮೇಲೆ ಕಣ್ಣಿಟ್ಟಿದ್ದ ಭಾರತದ ಮಹಿಳಾ ಕುಸ್ತಿಪಟು ವಿನೇಶ್ ಫೋಗಟ್ ಅವರು ಅಂತಿಮ ಪಂದ್ಯಕ್ಕೆ ಕೆಲವೇ ಗಂಟೆಗಳ ಮುಂಚೆ ಪಂದ್ಯಾವಳಿಯಿಂದ ಅನರ್ಹರಾಗಿದ್ದಾರೆ. 50 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿದ್ದ ವಿನೇಶ್, ನಿಗದಿಗಿಂತ ನೂರು ಗ್ರಾಂ ತೂಕ ಹೆಚ್ಚಾಗಿದ್ದಾರೆ ಎಂದು ಅನರ್ಹಗೊಳಿಸಲಾಗಿದೆ.

ವಿನೇಶ್ ಫೋಗಟ್ ಅವರು ಸಾಮಾನ್ಯವಾಗಿ 53 ಕೆಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿದ್ದರು. ಆದರೆ ಪ್ಯಾರಿಸ್ ಪಂದ್ಯಾವಳಿಯಲ್ಲಿ ಅವರು 50 ಕೆಜಿ ವಿಭಾಗದಲ್ಲಿ ಸ್ಪರ್ಧಿಸಲು ತೂಕ ಇಳಿಸಿಕೊಂಡಿದ್ದರು. ಆದರೆ, ಅಂತಿಮ ಪಂದ್ಯಕ್ಕೆ ಮುಂಚೆ ಅವರ ತೂಕ ಹೆಚ್ಚಾಗಿದ್ದು ಕಂಡು ಬಂದಿತ್ತು. ಅವರ ಅನರ್ಹತೆ ಪ್ರಶ್ನಿಸಿ ಭಾರತೀಯ ಒಲಂಪಿಕ್ ಒಕ್ಕೂಟ ಮನವಿ ಸಲ್ಲಿಸಿದೆ.

ಅಂತಿಮ ಸ್ಪರ್ಧೆಯ ಹಿಂದಿನ ದಿನ ಫೋಗಟ್ ಅವರ ತೂಕ ಒಂದು ಕೆಜಿ ಹೆಚ್ಚಾಗಿದ್ದು ಕಂಡು ಬಂತು. ಹೆಚ್ಚಿನ ತೂಕ ಇಳಿಸುವ ಸಲುವಾಗಿ ಅವರು ರಾತ್ರಿಯಿಡೀ ಕಠಿಣ ಕಸರತ್ತು ನಡೆಸಿದ್ದರು. ಆದರೆ, 900 ಗ್ರಾಂ ತೂಕ ಮಾತ್ರ ಇಳಿಸಲು ಸಾಧ್ಯವಾಯಿತು. (2ನೇ ಪುಟಕ್ಕೆ)

## ಹೈಕೋರ್ಟ್ ಆಕ್ಷೇಪಾರ್ಹ ಟಿಪ್ಪಣಿ ತೆಗೆದು ಹಾಕಿದ ಸುಪ್ರೀಂ ಕೋರ್ಟ್

ನವದೆಹಲಿ, ಆ. 7 - ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಏಕ ಸದಸ್ಯ ಪೀಠದ ನ್ಯಾಯಮೂರ್ತಿಯೊಬ್ಬರು ನ್ಯಾಯಾಂಗ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಸುಪ್ರೀಂ ಕೋರ್ಟ್ ಕುರಿತು ಮಾಡಿದ ಆಕ್ಷೇಪಾರ್ಹ ಹಾಗೂ ಅನಪೇಕ್ಷಿತ ಟಿಪ್ಪಣಿಗಳನ್ನು ಸುಪ್ರೀಂ ಕೋರ್ಟ್ ತೆಗೆದುಹಾಕಿದೆ.


ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯ ಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ಸದಸ್ಯರ ವಿಶೇಷ ಪೀಠ, ಹೈಕೋರ್ಟ್ ನ್ಯಾಯಮೂರ್ತಿ ರಾಜಬೀರ್ (2ನೇ ಪುಟಕ್ಕೆ)

## ರಾಜ್ಯಸಭೆಯ 12 ಸ್ಥಾನಗಳಿಗೆ ಚುನಾವಣೆ

ನವದೆಹಲಿ, ಆ. 7 - ರಾಜ್ಯಸಭೆಯಲ್ಲಿ ಖಾಲಿಯಾಗಿರುವ 9 ರಾಜ್ಯಗಳ 12 ಸ್ಥಾನಗಳಿಗೆ ಸೆಪ್ಟೆಂಬರ್ 3ರಂದು ಚುನಾವಣೆ ನಡೆಸಲಾಗುವುದು ಎಂದು ಚುನಾವಣಾ ಆಯೋಗ ತಿಳಿಸಿದೆ. (2ನೇ ಪುಟಕ್ಕೆ)

WANTED
TEACHERS & LECTURERS
CBSE & ICSE
Teachers, Principal, Vice Principal, Coordinator
Salary:
Up to 8-14 Lakhs /Annual *
PUC, NEET, JEE, KCET
Salary:
Up to 25 Lakhs /Annual *
Admission Counselor, Marketing Team, PRO, Campus Manager
Salary:
Up to 12 Lakhs /Annual *
T&C Apply*
Apply @
www.spsmrs.org



# ಹರಿಹರ ತಾ. ಬೀಜ, ರಸಗೊಬ್ಬರ ಮಾರಾಟಗಾರರಿಂದ ಭದ್ರೆಗೆ ಬಾಗಿನ

ಮಲೇಬೆನ್ನೂರು, ಆ. 7- ಭರ್ತಿಯಾಗಿರುವ ಭದ್ರಾ ಜಲಾಶಯಕ್ಕೆ ಮಂಗಳವಾರ ಹರಿಹರ ತಾಲ್ಲೂಕು ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕ್ರಿಮಿನಾಶಕ ಮಾರಾಟಗಾರರ ಸಂಘದಿಂದ ಗಂಗೆ ಪೂಜೆ ಸಲ್ಲಿಸಿ, ಬಾಗಿನ ಅರ್ಪಿಸಲಾಯಿತು.

ಈ ವೇಳೆ ಮಾತನಾಡಿದ ಸಂಘದ ಅಧ್ಯಕ್ಷ ಎಂ. ಕರಿಬಸಯ್ಯ ಅವರು, ಕಳೆದ ವರ್ಷ ಭದ್ರಾ ಡ್ಯಾಂ ಭರ್ತಿಯಾಗದ ಹಿನ್ನೆಲೆಯಲ್ಲಿ ಅಚ್ಚುಕಟ್ಟಿನ ರೈತರು ಸಂಕಷ್ಟ ಅನುಭವಿಸಬೇಕಾಯಿತು ಎಂದರು.

ಈ ವರ್ಷ ವರುಣನ ಕೃಪೆಯಿಂದ ಭದ್ರಾ ಡ್ಯಾಂ ಜುಲೈ ತಿಂಗಳಲ್ಲೇ ಪೂರ್ತಿಯಾಗಿರುವುದು ನಮ್ಮೆಲ್ಲರಿಗೂ ಸಂತೋಷ ತಂದಿದೆ. ರೈತರು ನೀರನ್ನು ಮಿತವಾಗಿ ಬಳಸುವ ಮೂಲಕ ಬೇಸಿಗೆ ಬೆಳೆಯನ್ನೂ ಸಮೃದ್ಧಿಯಾಗಿ ಬೆಳೆಯಲೆಂದು ಮತ್ತು ಭದ್ರೆ ಪ್ರತಿ ವರ್ಷ ಭರ್ತಿಯಾಗುವಂತೆ ಪ್ರಾರ್ಥಿಸಿದ್ದೇವೆ ಎಂದು ಕರಿಬಸಯ್ಯ ಅವರು ಹೇಳಿದರು.



ಸಂಘದ ಗೌರವಾಧ್ಯಕ್ಷರಾದ ಹಳ್ಳಿಹಾಳ್ ಹೆಚ್.ಟಿ. ಶಾಂತನಗೌಡ, ಕಾರ್ಯದರ್ಶಿ ಪೂಜಾರ್ ರಂಗನಾಥ್, ಖಜಾಂಚಿ ಕುಂಬಳೂರಿನ ಎಸ್.ಜಿ. ಯೋಗೇಂದ್ರಪ್ಪ, ಮಾರಾಟಗಾರರಾದ ಕುಂಬಳೂರಿನ ಬಿ. ಕೆಂಪೇಗೌಡ, ವೇದಮೂರ್ತಿ, ವೈ. ಪ್ರಶಾಂತ್, ಎಂ. ವಾಸುದೇವ ಮೂರ್ತಿ, ಮಲೇಬೆನ್ನೂರಿನ ಎಳೆಹೊಳೆ ಕುಮಾರ್, ರಾಜು, ಮಂಜುನಾಥ್, ಜಿಗಳಿಯ ಗೌಡ್ರ ಬಸವರಾಜಪ್ಪ, ಹೊಳೆಸಿರಿಗೆರೆಯ ಕೆ. ರುದ್ರೇಶ್, ಮಹೇಶ್, ಮೂಗಿನಗೊಂದಿ ಶಿವು, ಪಾಳ್ಯದ ಹನುಮಗೌಡ, ಹರಳಹಳ್ಳಿ ರಾಜಪ್ಪ, ಹಾಲಿವಾಣದ ಲೋಹಿತ್, ಹರಿಹರದ ಅನಿಲ್, ಗದಿಗೆಪ್ಪ, ಕೊಂಡಜ್ಜಿ ವಿಜಿ, ನಂದಿತಾವರೆಯ ಭೀಮೇಶ್, ನಿಟ್ಟೂರು ಹರೀಶ್, ಗೋವಿನಹಾಳ್ ರವದಿಗೌಡ್ರ ನಾಗರಾಜ್ ಮತ್ತು ನೀರು ಬಳಕೆದಾರರ ಮಹಾಮಂಡಳದ ಅಧ್ಯಕ್ಷ ವೈ. ದ್ಯಾವಪ್ಪ ರೆಡ್ಡಿ, ಡಿಸಿಸಿ ಬ್ಯಾಂಕಿನ ನಿರ್ದೇಶಕ ಮುದೇಗೌಡ್ರ ಗಿರೀಶ್, ಜಿ.ಪಂ. ಮಾಜಿ ಸದಸ್ಯ ಬಿ.ಎಂ. ವಾಗೀಶ್‌ಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಪುರಸಭೆ ಸದಸ್ಯ ಬಿ. ವೀರಯ್ಯ ಸೇರಿದಂತೆ, ಇನ್ನೂ ಅನೇಕರು ಭಾಗವಹಿಸಿದ್ದರು.

# ದಾವಣಗೆರೆಗೆ ಐ.ಟಿ. ಪಾರ್ಕ್

**(1ನೇ ಪುಟದಿಂದ)** ಯೋಜನೆ, ಆರ್ಥಿಕವಾಗಿ ಹಿಂದುಳಿದ ವಲಯಗಳಲ್ಲಿ ಉದ್ಯಮಗಳಿಗೆ ಉತ್ತೇಜನ ನೀಡುವ ಸಮೃದ್ಧಿ ಯೋಜನೆ ಹಾಗೂ ನವೋದ್ಯಮಿಗಳಿಗೆ ಉತ್ತೇಜನ ನೀಡುವ ಜೆನೆಸಿಸ್ ಯೋಜನೆಗಳನ್ನು ಹೊಂದಲಾಗಿದೆ ಎಂದು ಸಚಿವ ಪ್ರಸಾದ್ ಹೇಳಿದರು.

ಪ್ರಸಕ್ತ ಐ.ಟಿ. ಉದ್ಯಮಗಳು ದೇಶದ 7 ಮಹಾನಗರಗಳಲ್ಲಿ ಕೇಂದ್ರೀಕೃತವಾಗಿವೆ. ಸರ್ಕಾರ ಐ.ಟಿ. ಉದ್ಯಮಗಳನ್ನು 2 ಹಾಗೂ 3ನೇ ಹಂತದ ನಗರಗಳಿಗೆ ತರುವ ಪ್ರಯತ್ನ ನಡೆಸಿದೆ. ಇದರಿಂದಾಗಿ ಬೆಂಗಳೂರು ಹಾಗೂ ಹೈದರಾಬಾದ್ ರೀತಿಯ ಮಹಾನಗರಗಳಲ್ಲಿನ ಒತ್ತಡ ಕಡಿಮೆಯಾಗಲಿದೆ ಹಾಗೂ ಐ.ಟಿ. ಕ್ರಾಂತಿ ಸಣ್ಣ ನಗರಗಳ ಮೂಲಕ ಎಲ್ಲ ಜನರಿಗೆ ತಲುಪಲಿದೆ ಎಂದು ಸಚಿವರು ತಿಳಿಸಿದರು.

ಸರ್ಕಾರ ದೇಶದಲ್ಲಿ 65 ಎಸ್.ಟಿ.ಪಿ.ಐ. ಕೇಂದ್ರಗಳನ್ನು ತೆರೆದಿದೆ. ಇವುಗಳಲ್ಲಿ 57 ಎರಡನೇ ಹಾಗೂ ಮೂರನೇ ಹಂತದ ನಗರಗಳಲ್ಲಿವೆ ಎಂದೂ ಸಚಿವರು ಹೇಳಿದರು.

ಇದಕ್ಕೂ ಮುಂಚೆ ಮಾತನಾಡಿದ ಸಂಸದೆ ಪ್ರಭಾ ಮಲ್ಲಿಕಾರ್ಜುನ್, ದಾವಣಗೆರೆ ನಗರವು ಕರ್ನಾಟಕದ ಮಧ್ಯ ಭಾಗದಲ್ಲಿದೆ. ಇಲ್ಲಿ ಉತ್ತಮ ಸಂಪರ್ಕ ವ್ಯವಸ್ಥೆ ಇದೆ. ಸುಮಾರು 15 ಇಂಜಿನಿಯರಿಂಗ್ ಕಾಲೇಜುಗಳು 150 ಕಿ.ಮೀ. ವ್ಯಾಪ್ತಿಯಲ್ಲಿದ್ದು, ಸಾವಿರಾರು ಇಂಜಿನಿಯರಿಂಗ್ ಪದವೀಧರರಿದ್ದಾರೆ ಎಂದರು.

ಈ ಭಾಗದಲ್ಲಿ ಕೌಶಲ್ಯ ಹೆಚ್ಚಾಗಿದ್ದರೂ ಉದ್ಯೋಗಾವಕಾಶ ಕಡಿಮೆ. ಹೀಗಾಗಿ ಉದ್ಯೋಗಕ್ಕಾಗಿ ಬೆಂಗಳೂರಿನಂತಹ ನಗರಗಳಿಗೆ ತೆರಳಬೇಕಿದೆ. ಮೂಲಭೂತ ಸೌಲಭ್ಯ, ಶಿಕ್ಷಣ ಹಾಗೂ ಸಂಪರ್ಕ ವ್ಯವಸ್ಥೆ ಇರುವ ದಾವಣಗೆರೆ ಐ.ಟಿ. ಹಬ್ ಸ್ಥಾಪನೆಗೆ ಸೂಕ್ತ ತಾಣವಾಗಿದೆ. ಇಲ್ಲಿ ಐ.ಟಿ. ಹಬ್ ಸ್ಥಾಪಿಸಲು ಕಂಪನಿಗಳಿಗೆ ಹಣಕಾಸು ನೆರವು ನೀಡುವ ಅಗತ್ಯದ ಬಗ್ಗೆ ಸರ್ಕಾರ ಗಮನ ಹರಿಸಲಿದೆಯೇ? ಎಂದು ಪ್ರಶ್ನಿಸಿದರು.

# ಮಸೂದೆಗೆ ಅಂಗೀಕಾರ

**(1ನೇ ಪುಟದಿಂದ)** ಲಾಭದ ಮೇಲಿನ ತೆರಿಗೆಯನ್ನು ಶೇ.20 ರಿಂದ ಶೇ. 12.5ಕ್ಕೆ ಇಳಿಕೆ ಮಾಡಿದ್ದರು. ಆದರೆ ಇದಕ್ಕೆ ಇಂಡೆಕ್ಸೈಷನ್ ಲಾಭ ಅನ್ವಯವಾಗುತ್ತಿರಲಿಲ್ಲ.

ಈ ಬಗ್ಗೆ ತೀವ್ರ ಆಕ್ಷೇಪಗಳು ವ್ಯಕ್ತವಾದ ನಂತರ ತಿದ್ದುಪಡಿ ತರಲಾಗಿದೆ. ಜುಲೈ 23, 2024ಕ್ಕೆ ಮುಂಚೆ ಆಸ್ತಿಗಳನ್ನು ಮಾರಿದವರು ಹಳೆಯ ಇಲ್ಲವೇ ಹೊಸ ತೆರಿಗೆ ಪದ್ಧತಿಗಳಲ್ಲಿ ಯಾವುದನ್ನಾದರೂ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ.

45 ಅಧಿಕೃತ ತಿದ್ದುಪಡಿಗಳಿಗೆ ಧ್ವನಿ ಮತದ ಮೂಲಕ ಅಂಗೀಕಾರ ನೀಡುವುದರೊಂದಿಗೆ ಲೋಕಸಭೆಯು ಮಸೂದೆ ಅಂಗೀಕರಿಸಿದೆ.

ಹಣಕಾಸು ಮಸೂದೆಯನ್ನು ಈಗ ರಾಜ್ಯಸಭೆಗೆ ಕಳಿಸಲಾಗುವುದು. ರಾಜ್ಯಸಭೆ ಮಸೂದೆ ಕುರಿತು ಚರ್ಚಿಸಬಹುದೇ ಹೊರತು ತಿರಸ್ಕರಿಸುವ ಅಧಿಕಾರ ಹೊಂದಿಲ್ಲ.

# ಟಿಪ್ಪಣಿ ತೆಗೆದು ಹಾಕಿದ ಸುಪ್ರೀಂ ಕೋರ್ಟ್

**(1ನೇ ಪುಟದಿಂದ)** ಸೆಹ್ರಾವತ್ ಅವರ ಟಿಪ್ಪಣಿಗಳ ಕುರಿತು ಸ್ವಯಂ ಪ್ರೇರಿತ ಪರಿಶೀಲನೆ ನಡೆಸಿತ್ತು.

ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ಸೇರಿದಂತೆ ಯಾವುದು ಸರ್ವೋಚ್ಚ ಅಲ್ಲ. ಸಂವಿಧಾನವೇ ಸರ್ವೋಚ್ಚ ಎಂದು ಸುಪ್ರೀಂ ಕೋರ್ಟ್ ಪೀಠ ಕೇಳಿದೆ. ಈ ಪೀಠದಲ್ಲಿ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಬಿ.ಆರ್. ಗವಾಯಿ, ಸೂರ್ಯ ಕಾಂತ್ ಹಾಗೂ ಹೃಶಿಕೇಶ್ ರಾಯ್ ಅವರಿದ್ದಾರೆ.

ಆದರೆ ಹೈಕೋರ್ಟ್ ನ್ಯಾಯಮೂರ್ತಿಗಳ ಆಕ್ಷೇಪಾರ್ಹ ಹೇಳಿಕೆಗಳ ಸಂಬಂಧ ಯಾವುದೇ ಕ್ರಮಕ್ಕೆ ಸುಪ್ರೀಂ ಕೋರ್ಟ್ ಮುಂದಾಗಿಲ್ಲ.

# ಯಂತ್ರೋಪಕರಣಗಳಿಂದಾಗಿ ನೇಕಾರರ ಬದುಕು ದುಸ್ಥರ

ಹರಪನಹಳ್ಳಿ, ಆ.7 - ಯಂತ್ರೋಪಕರಣಗಳಿಂದಾಗಿ ನೇಕಾರರ ಬದುಕು ದುಸ್ಥರವಾಗಿದೆ ಎಂದು ಬಿಜೆಪಿ ಮಹಿಳಾ ಮೋರ್ಚಾದ ತಾಲ್ಲೂಕು ಅಧ್ಯಕ್ಷೆ ಸಪ್ನಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ಬಸಮ್ಮ ಕಲಾಮಂದಿರದಲ್ಲಿ ರಾಷ್ಟ್ರೀಯ ಕೈಮಗ್ಗ ದಿನಾಚರಣೆ ಪ್ರಯುಕ್ತ ನಡೆದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೈಮಗ್ಗವು ಉದ್ಯೋಗದ ಅತೀ ದೊಡ್ಡ ಕ್ಷೇತ್ರಗಳಲ್ಲಿ ಒಂದಾಗಿದೆ. ಗ್ರಾಮೀಣ ಆರ್ಥಿಕತೆಯಲ್ಲಿ ಹೆಚ್ಚು ಮಹತ್ವದ್ದಾಗಿದೆ. ಅತೀ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿಗೆ ಉದ್ಯೋಗ ಕಲ್ಪಿಸಿಕೊಡುತ್ತದೆ ಮತ್ತು ಆರ್ಥಿಕ ಸಬಲೀಕರಣಗೊಳಿಸುತ್ತದೆ ಎಂದರು.

1905ರಲ್ಲಿ ಪ್ರಾರಂಭವಾದ ಸ್ವದೇಶಿ ಚಳುವಳಿಯಿಂದ ಕೈಮಗ್ಗ ಹುಟ್ಟಿಕೊಂಡಿದ್ದು, ಇದು ದೇಶಿಯ ಉದ್ಯಮವನ್ನು ಪುನಃ ಸ್ಥಾಪಿಸಲು ಮತ್ತು ಬ್ರಿಟಿಷ್ ಸರಕುಗಳ ಆಮದು ಕಡಿಮೆ ಮಾಡುವ ಪ್ರಯತ್ನವಾಗಿದ್ದರಿಂದ ಸ್ಥಳೀಯ ಆರ್ಥಿಕತೆ ಹೆಚ್ಚಿಸಲು ಸಹಾಯ ಮಾಡಿತು ಎಂದು ಹೇಳಿದರು. 2015ರಲ್ಲಿ ಆಗಸ್ಟ್ 7ನ್ನು ರಾಷ್ಟ್ರೀಯ ಕೈಮಗ್ಗ ದಿನವೆಂದು ಘೋಷಿಸಲಾಯಿತು. ಎಲ್ಲರೂ ಭಾರತದ ಸಾಂಪ್ರದಾಯಿಕ ಕೈಮಗ್ಗ ಉತ್ಪನ್ನ ಖರೀದಿಸಿ ಬಳಸುವ ಮೂಲಕ ನೇಕಾರರಿಗೆ ಆರ್ಥಿಕ ಬಲ ತುಂಬ ಬೇಕಾಗಿದೆ ಎಂದರು.



**ಸಪ್ನ ಮಲ್ಲಿಕಾರ್ಜುನ್**

ಬಿಜೆಪಿ ಮಹಿಳಾ ಮೋರ್ಚಾ ಪದಾಧಿಕಾರಿಗಳು ಮತ್ತು ಸದಸ್ಯರು ಕೈಮಗ್ಗ ಉತ್ಪನ್ನಗಳನ್ನು ಧರಿಸಿ ಖಾದಿ ಗ್ರಾಮೋದ್ಯೋಗ ಭಂಡಾರಕ್ಕೆ ಭೇಟಿ ನೀಡಿ ಕೈಮಗ್ಗದ ವಿವಿಧ ವಸ್ತುಗಳನ್ನು ಖರೀದಿಸಿದರು.

ಕಾರ್ಯಕ್ರಮದಲ್ಲಿ ಪ್ರಧಾನ ಕಾರ್ಯದರ್ಶಿ ಮಂಜುಳಾ ನಾಗರಾಜ್, ಉಪಾಧ್ಯಕ್ಷೆ ಉಮಾದೇವಿ, ಜಾನಕಮ್ಮ, ಕಲ್ಪನಾ, ಖಜಾಂಚಿ ಕೆ.ಎಂ. ಕೊಟ್ರಮ್ಮ, ಪದ್ಮಾವತಿ, ಶೀಲಾ, ರೇಣುಕಮ್ಮ, ಮಂಜುಳಾ ಮಡಿವಾಳರ ಇದ್ದರು.

# ಗೋವಾ ಸಂಪರ್ಕಿಸುವ ಕಾಳಿ ಸೇತುವೆ ಕುಸಿತ : ನದಿಗೆ ಬಿದ್ದ ಲಾರಿ

ಕಾರವಾರ, ಆ. 7 - ಇಲ್ಲಿನ ಕೋಡಿಬಾಗದಲ್ಲಿರುವ ಕಾಳಿ ಸೇತುವೆಯು ಮಂಗಳವಾರ ತಡರಾತ್ರಿ ಕುಸಿದು ಬಿದ್ದಿದೆ. 4 ದಶಕಗಳ ಹಳೆ ಸೇತುವೆ ಮೂರು ಕಡೆ ಕುಸಿದಿದೆ.

ಇದರಿಂದಾಗಿ ಗೋವಾದಿಂದ ಕಾರವಾರ ಕಡೆಗೆ ಸಂಚರಿಸುತ್ತಿದ್ದ ಲಾರಿಯೊಂದು ನದಿಗೆ ಬಿದ್ದಿದೆ. ಲಾರಿ ಚಾಲಕನನ್ನು ಸ್ಥಳೀಯ ಮೀನುಗಾರರು ರಕ್ಷಣೆ ಮಾಡಿದ್ದಾರೆ. ಚತುಷ್ಪಥ ರಾಷ್ಟ್ರೀಯ ಹೆದ್ದಾರಿ-66ರಲ್ಲಿನ ಕಾಳಿ ನದಿಗೆ ಎರಡು ಸೇತುವೆಗಳಿವೆ. ಗೋವಾ ಕಡೆಯಿಂದ ಕಾರವಾರದತ್ತ ವಾಹನಗಳು ಸಂಚರಿಸುತ್ತಿದ್ದ ಸೇತುವೆಯು ಮುರಿದು ಬಿದ್ದಿದೆ.

ಈ ಸೇತುವೆಯನ್ನು 1983ರಲ್ಲಿ ನಿರ್ಮಿಸಲಾಗಿತ್ತು. 2009ರಲ್ಲಿ ಸೇತುವೆಯ ಸಂಪೂರ್ಣ ದುರಸ್ತಿಗೆ ಪ್ರಯತ್ನಿಸಲಾಗಿತ್ತು. ಆದರೆ, ಅದು ಸಾಧ್ಯವಾಗಿರಲಿಲ್ಲ. 2018ರಲ್ಲಿ ಇದೇ ಸೇತುವೆ ಪಕ್ಕದಲ್ಲಿ ಇನ್ನೊಂದು ಸೇತುವೆಯನ್ನು ನಿರ್ಮಿಸಲಾಗಿದೆ.

# ರೈಲ್ವೆ ಯೋಜನೆಗೆ 150 ಕೋಟಿ ರೂ.

**(1ನೇ ಪುಟದಿಂದ)** 2024-25ರ ಹಣಕಾಸು ವರ್ಷದಲ್ಲಿ 150 ಕೋಟಿ ರೂ. ಒದಗಿಸಲಾಗಿದೆ. ಲಭ್ಯವಿರುವ ಜಾಗದಲ್ಲಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ ಎಂದವರು ತಿಳಿಸಿದ್ದಾರೆ. ರಾಜ್ಯ ಸರ್ಕಾರ ತ್ವರಿತವಾಗಿ ಜಾಗ ಒದಗಿಸುವುದು, ಅರಣ್ಯ ಇಲಾಖೆಯ ಅನುಮೋದನೆ ಸೇರಿದಂತೆ ಹಲವಾರು ವಿಷಯಗಳು ಯೋಜನೆ ಅಂತಿಮಗೊಳ್ಳುವ ಸಮಯವನ್ನು ನಿರ್ಧರಿಸುತ್ತವೆ. ಈ ಎಲ್ಲ ಅಂಶಗಳ ಹೊರತಾಗಿಯೂ ಯೋಜನೆಯನ್ನು ತ್ವರಿತವಾಗಿ ಜಾರಿಗೆ ತರಲು ಎಲ್ಲ ಪ್ರಯತ್ನ ನಡೆಸಲಾಗುತ್ತಿದೆ ಎಂದವರು ಹೇಳಿದ್ದಾರೆ.

ದಾವಣಗೆರೆ - ಚಿತ್ರದುರ್ಗ – ತುಮಕೂರು ನೇರ ರೈಲು ಮಾರ್ಗ ಯೋಜನೆ ಜಾರಿಗೆ ತರುವುದರಿಂದ ದಾವಣಗೆರೆ ಹಾಗೂ ಬೆಂಗಳೂರು ನಡುವಿನ ರೈಲ್ವೆ ಪ್ರಯಾಣ 60 ಕಿ.ಮೀ. ಕಡಿಮೆಯಾಗಲಿದೆ. ಈ ಯೋಜನೆ ಯಾವಾಗ ಪೂರ್ಣಗೊಳ್ಳಲಿದೆ ಎಂದು ಉಭಯ ಸಂಸದರು ಪ್ರಶ್ನಿಸಿದ್ದರು.

# ಪ್ರಾಧ್ಯಾಪಕ, ನರ್ಸ್ ನೇಮಕಕ್ಕೆ ಸೂಚನೆ

**(1ನೇ ಪುಟದಿಂದ)** ನೇಮಕಾತಿ ನಡೆಯಬೇಕು, ಇದಕ್ಕಾಗಿ ನೇಮಕಾತಿ ಬೈಲಾಗಳನ್ನು ತಿದ್ದುಪಡಿ ಮಾಡಲಾಗುವುದು ಎಂದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ ದಾದಿಯರ ನೇಮಕಾತಿಗೆ ಅನ್ವಯವಾಗುವ ಸಿ ಮತ್ತು ಆರ್ ನಿಯಮಗಳನ್ನು ಅನುಸರಿಸುವಂತೆ ಸಚಿವರು, ಇಲಾಖೆ ನಿರ್ದೇಶಕರು ಮತ್ತು ಜಂಟಿ ಕಾರ್ಯದರ್ಶಿಗೆ ಸೂಚಿಸಿದರು.

ಕೆಇಎಗೆ ನೇಮಕಾತಿ ನಿಲುವಳಿ ಹಸ್ತಾಂತರ ಹಾಗೂ ಸುಗಮ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲವಾಗುವಂತೆ ತಜ್ಞರ ಸಮಿತಿ ರಚನೆಗೆ ವೈದ್ಯಕೀಯ ಶಿಕ್ಷಣ ನಿರ್ದೇಶಕಿ ಡಾ.ಸುಜಾತ ರಾಥೋಡ್ ಅವರಿಗೆ ಸಚಿವರು ಸೂಚಿಸಿದರು.


**ಜಮೀನು ಬೇಕಾಗಿದೆ**
ನೀರಾವರಿ, ಬೆದ್ದಲು, ಅಡಿಕೆ, ತೆಂಗು ತೋಟ ದಾವಣಗೆರೆಯಿಂದ 45 ಕಿಲೋಮೀಟರ್ ಒಳಗೆ
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409
(ಏಜೆಂಟರೂ ಸಹ ಸಂಪರ್ಕಿಸಬಹುದು)

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ
(ಶ್ರಾವಣ ಮಾಸದ ಪ್ರಯುಕ್ತ ಕೇವಲ 4 ದಿವಸ ಮಾತ್ರ ಈ ರೇಟ್)
50x80 ಪಶ್ಚಿಮ, ರೂ. 2,465/- ಅಡಿಗೆ.
40x60 ವೆಸ್ಟ್ (62 ಲಕ್ಷ) 40x60 ಸೌತ್ (61 ಲಕ್ಷ)
ಕಿರಣ್ ಬೂಸ್ನೂರ್ (ಏಜೆಂಟ್)
97315 63409, 98440 63409
(ಸೌತ್ ಸೈಟ್ ಸೇಲ್ ಆಗಿದೆ)

**ಮನೆ ಮಾರಾಟಕ್ಕಿದೆ**
ನೂತನವಾಗಿ ನಿರ್ಮಿಸಿರುವ 30x40 ಅಡಿವುಳ್ಳ ಪೂರ್ವ ದಿಕ್ಕಿನ 3 ಅಂತಸ್ತಿನ ಕಟ್ಟಡ, 4 ರೂಂಗಳುಳ್ಳ ಮತ್ತು 1 ಆಫೀಸ್‌ಗೆ ಸೌಕರ್ಯವಿದ್ದು, 3 ಕಾರ್ ಪಾರ್ಕಿಂಗ್ ವ್ಯವಸ್ಥೆಯಿರುವ ಮನೆ ಮಾರಾಟಕ್ಕಿದೆ. ಮನೆಯ ಎದುರುಗಡೆ ಪಾರ್ಕ್ ಇದೆ.
ಸ್ಥಳ : ಕೆ.ಹೆಚ್.ಬಿ ಕಾಲೋನಿ, ತುಂಗಾಭದ್ರಾ ಬಡಾವಣೆ, ಹೊಸ ಕುಂದುವಾಡ, ಜಡ್ಜ್ ಕ್ವಾಟ್ರರ್ಸ್ ಹತ್ತಿರ ದಾವಣಗೆರೆ.
99722 60333, 94819 62666

**Property Hub**
• EC
• E-swathu
• Building Licence
• Khatha Change
96118 66449

**OFFICE SPACE FOR RENT**
1000 Sqft, 1st floor, 9th main, P.J. Extn. Davanagere.
98444 93755

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.7.8.2024ರ ಬುಧವಾರ
ದಿ.8.8.2024ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಮನೆ ಬಾಡಿಗೆಗಿದೆ**
ಕುವೆಂಪು ನಗರದಲ್ಲಿ ಮೊದಲನೇ ಮಹಡಿಯ ಮನೆಯು ಎಲ್ಲಾ ಸೌಕರ್ಯಗಳನ್ನು ಹೊಂದಿದ್ದು, ಡಬಲ್ ಬೆಡ್ ರೂಮ್‌ಗಳನ್ನು ಹೊಂದಿದ್ದು, ಬಾಡಿಗೆಗೆ ದೊರೆಯುವುದಿದೆ. ಆಸಕ್ತರು ಸಂಪರ್ಕಿಸಿ :
99863 31471
(ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ)

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**FULLY AUTOMATIC**
ಗ್ಯಾಸ್ ಗೀಸರ್ ಎಕ್ಸ್‌ಚೇಂಜ್
1000/- Rs. Off
ಸೇಲ್ಸ್, ಸರ್ವೀಸ್‌ಗಾಗಿ
ಮರುತ್ ಎಂಟರ್ ಪ್ರೈಸಸ್
ವೈ.ಎಂ.ಸಿ. ಕಾಂಪ್ಲೆಕ್ಸ್, ಸ್ಟೇಡಿಯಂ ಎದುರು, ಬಾಪೂಜಿ ಬ್ಯಾಂಕ್ ಹತ್ತಿರ, ದಾವಣಗೆರೆ.
98868 96574, 98458 67574

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**DOUBLE ROOMS**
**ಮನೆ ಲೀಸ್‌ಗೆ ಇರುತ್ತದೆ**
ಎಲ್ಲಾ ಸೌಲಭ್ಯವುಳ್ಳ ಹೊಸ ಮನೆ ಲೀಸ್‌ಗೆ ಇದೆ. ಕೊಂಡಜ್ಜಿ ರಸ್ತೆ, ವಿನಾಯಕ ಪಬ್ಲಿಕ್ ಸ್ಕೂಲ್ ಹಿಂಭಾಗ ಅಶೋಕ ನಗರ, ದಾವಣಗೆರೆ.
95356 10817, 74060 70957

**REQUIRED**
Lady candidate for Office work, and Accountant GST
PJ Extension, Davanagere
99006 66122

**WANTED TEACHERS**
Any Degree With Excellent Communication in English, Davanagere
99641 10736

**WANTED**
Social Science teacher wanted for High school must be 5 years experienced.
Contact:
97315 55751, 73386 04513
73386 04512

**ಮಳಿಗೆ ಬಾಡಿಗೆಗಿದೆ**
Shop For Rent
ಬೆಳ್ಳೂಳ್ಳಿ ಬಿಲ್ಡಿಂಗ್, ಪಿ.ಬಿ. ರೋಡ್, ಶ್ರೀ ಲಾಡ್ಜ್ ಎದುರು,
ಗ್ರೌಂಡ್ ಫ್ಲೋರ್, 1400 ಚ.ಅ.,
1ನೇ ಮಹಡಿ - 1400 ಚ.ಅ.,
2ನೇ ಮಹಡಿ, 1400 ಚ.ಅ.
99022 79003

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**WANTED**
ಬೇಕಾಗಿದ್ದಾರೆ
Staff Nurse ಸ್ಟಾಫ್ ನರ್ಸ್
97391 19466
95350 75273

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ನಂ.1 ವಶೀಕರಣಂ**
ನೀವು ಇಷ್ಟ ಪಟ್ಟ ಸ್ತ್ರೀ ಪುರುಷ, ಅತ್ತೆ, ಸೊಸೆ ಕಿರಿಕಿರಿ, ಮದುವೆ ವಿಳಂಬ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ ಸಂಭೋಗ ಮೋಹಿನಿ ಮತ್ತು ಕಾಮೇಶ್ವರಿ ಮಂತ್ರದಿಂದ
100% ಪರಿಹಾರ ಶತಃಸಿದ್ಧ.
ಕೇವಲ 3 ದಿನಗಳಲ್ಲಿ ಫೋನಿನ ಮೂಲಕ ಪರಿಹಾರ.
ಮೊ : 99644 84508


# ಮಲೇಬೆನ್ನೂರು ಪುರಸಭೆ ಅಧ್ಯಕ್ಷ ಸ್ಥಾನದ ಮೀಸಲಾತಿ ಬದಲಿಸುವಂತೆ ಹೈಕೋರ್ಟ್ ಮೊರೆ

ಮಲೇಬೆನ್ನೂರು, ಆ. 7 - ಇಲ್ಲಿನ ಪುರಸಭೆಯ ಅಧ್ಯಕ್ಷ ಸ್ಥಾನವನ್ನು ಎಸ್ಸಿ ಮಹಿಳೆಗೆ ಮತ್ತು ಉಪಾಧ್ಯಕ್ಷ ಸ್ಥಾನವನ್ನು ಸಾಮಾನ್ಯ ಮಹಿಳೆಗೆ ನಿಗದಿ ಪಡಿಸಿ ಸರ್ಕಾರ ಆದೇಶ ಹೊರಡಿಸಿದೆ.

ಆದರೆ ಅಧ್ಯಕ್ಷ ಸ್ಥಾನವನ್ನು ಮೀಸಲಟ್ಟಿರುವ ಎಸ್ಸಿ ಮಹಿಳೆ ಈ ಪುರಸಭೆಯಲ್ಲಿ ಆಯ್ಕೆಯಾಗಿಲ್ಲ. ಹಾಗಾಗಿ ಸರ್ಕಾರದ ಈ ತೀರ್ಮಾನವನ್ನು ಪ್ರಶ್ನಿಸಿ ಮತ್ತು ಅಧ್ಯಕ್ಷ ಸ್ಥಾನವನ್ನು ಎಸ್ಸಿ ಮಹಿಳೆ ಹೊರತು ಪಡಿಸಿ, ಬೇರೆ ಮೀಸಲಾತಿ ನೀಡುವಂತೆ ಪುರಸಭೆ ಸದಸ್ಯರು ಹೈಕೋರ್ಟ್‌ಗೆ ಮನವಿ ಸಲ್ಲಿಸಿದ್ದಾರೆ ಎನ್ನಲಾಗಿದೆ.

ಇಲ್ಲಿನ ಪುರಸಭೆಯಲ್ಲಿ ಎಸ್ಸಿ ಸಾಮಾನ್ಯದಿಂದ ಟಿ. ಹನುಮಂತಪ್ಪ ಮಾತ್ರ ಆಯ್ಕೆಯಗಿದ್ದು, ಎಸ್ಸಿ ಮಹಿಳೆಯರೂ ಆಯ್ಕೆಯಾಗಿಲ್ಲ. ಸಾಮಾನ್ಯ ಮಹಿಳಗೆ ಮಿಸಲಾಗಿರುವ ಉಪಾಧ್ಯಕ್ಷ ಸ್ಥಾನಕ್ಕೆ 11 ಜನ ಮಹಿಳೆಯರು ಇದ್ದಾರೆ. ಒಟ್ಟು 23 ಸ್ಥಾನಗಳಲ್ಲಿ 11 ಮಹಿಳೆಯರು, 12 ಪುರುಷರು ಆಯ್ಕೆಯಾಗಿದ್ದಾರೆ. ಪುರಸಭೆಯಲ್ಲಿ ಕಾಂಗ್ರೆಸ್ ಬಹುಮತ ಹೊಂದಿದೆ.

**ತಿಂಗಳ ಬಳಿಕ ಮೀಸಲಾತಿ :** ಮಲೇಬೆನ್ನೂರು ಪುರಸಭೆಗೆ ನೂತನ ಸದಸ್ಯರು 2022ರ ಜನವರಿಯಲ್ಲಿ ಆಯ್ಕೆಯಾಗಿದ್ದರು. ಸತತ 31 ತಿಂಗಳುಗಳ ಬಳಿಕ ಸರ್ಕಾರವು ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ಪ್ರಕಟಿಸಿದೆ. ಆದರೆ ವಿಪರ್ಯಾಸ ಎಂದರೆ ಅಧ್ಯಕ್ಷ ಸ್ಥಾನಕ್ಕೆ ಮೀಸಲಿಟ್ಟಿರುವ ಮೀಸಲಾತಿಯವರು ಈ ಪುರಸಭೆಯಲ್ಲಿ ಆಯ್ಕೆಯಾಗಿಲ್ಲ.

ಸಂಬಂಧಪಟ್ಟ ಇಲಾಖೆಯು ಇಂತಹ ಸಾಮಾನ್ಯ ಜ್ಞಾನ ಇಲ್ಲದಂತೆ ಮಿಸಲಾತಿ ಪ್ರಕಟಿಸಿರುವುದಕ್ಕೆ ಪಟ್ಟಣದ ಜನತೆ ಬೇಸರ ವ್ಯಕ್ತಪಡಿಸಿದರು.

ಕಳೆದ 31 ತಿಂಗಳಿನಿಂದ ಅಧ್ಯಕ್ಷ-ಉಪಾಧ್ಯಕ್ಷರು ಇಲ್ಲದೇ, ಆಡಳಿತ ಯಂತ್ರ ಕುಸಿದಿದೆ. ಈಗ ಮತ್ತೆ ಇಂತಹ ನಿರ್ಲಕ್ಷ್ಯ ಮಾಡಲಾಗಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

# ಒಲಂಪಿಕ್‌ನಲ್ಲಿ ನಿರಾಸೆ

**(1ನೇ ಪುಟದಿಂದ)** ಅಂತಿಮ ಪಂದ್ಯಕ್ಕೆ ಮುಂಚೆ ತೂಕ ಇಳಿಸಿಕೊಳ್ಳಲು ಅವರು ರಾತ್ರಿ ಇಡೀ ನಿದ್ರೆ ಮಾಡಿರಲಿಲ್ಲ ಎಂದು ಮೂಲಗಳು ತಿಳಿಸಿವೆ.

ಅವರ ತೂಕ ಮಿತಿಗಿಂತ ಹೆಚ್ಚಾಗಿದ್ದನ್ನು ಪರಿಗಣಿಸಿದ ಭಾರತೀಯ ಅಧಿಕಾರಿಗಳು, ಇನ್ನಷ್ಟು ಸಮಯ ನೀಡಬೇಕು ಎಂದು ಕೋರಿದರು. ಆದರೆ ಇದಕ್ಕೆ ಸಮಯ ಸಿಗಲಿಲ್ಲ ಎಂದು ಮೂಲಗಳು ಹೇಳಿವೆ. ಭಾರತೀಯ ಒಲಂಪಿಕ್ ಒಕ್ಕೂಟದ ಅಧ್ಯಕ್ಷೆ ಪಿ.ಟಿ. ಉಷಾ ಅವರು ಈ ವಿಷಯದಲ್ಲಿ ಮನವಿ ಸಲ್ಲಿಸಲು ಮುಂದಾಗಿದ್ದಾರೆ.

ವಿನೇಶ್ ಫೋಗಟ್ ಅವರು ಒಲಂಪಿಕ್ ಪಂದ್ಯಾವಳಿಯಲ್ಲಿ ಅಂತಿಮ ಘಟ್ಟಕ್ಕೆ ತಲುಪಿದ ಮೊದಲ ಭಾರತೀಯ ಮಹಿಳೆ ಎಂಬ ಇತಿಹಾಸ ಬರೆದಿದ್ದರು. ಬಂಗಾರ ಇಲ್ಲವೇ ಬೆಳ್ಳಿ ಪದಕ ಗಳಿಸುವ ಸನಿಹದಲ್ಲಿರುವಾಗ ಅನರ್ಹತೆಗೆ ಗುರಿಯಾಗಿರುವುದು ಭಾರತೀಯ ಕ್ರೀಡಾ ವಲಯದಲ್ಲಿ ಆಘಾತ ತಂದಿದೆ.

# ದುಬಾರಿ ಮದ್ಯಗಳ ಬೆಲೆ ಇಳಿಕೆ

**(1ನೇ ಪುಟದಿಂದ)** ಬಡತನ ರೇಖೆಗಿಂತ ಕೆಳಗಿನವರು ಮತ್ತು ಕಾರ್ಮಿಕರು ಸೇವಿಸುವ ಮದ್ಯದ ದರವನ್ನು ಹಾಗೇ ಉಳಿಸಿಕೊಳ್ಳಲಿದ್ದಾರೆ. ಹಾಲಿ ಇರುವ ಮದ್ಯದ ದರ ಸ್ಲ್ಯಾಬ್‌ಗಳನ್ನು 18ರಿಂದ 16ಕ್ಕೆ ಇಳಿಸಲು ಮುಂದಾಗಿದ್ದು, ಇದರಿಂದ ಮಧ್ಯಮ ಹಾಗೂ ಶ್ರೀಮಂತ ವರ್ಗ ಸೇವಿಸುವ ಮದ್ಯದ ದರಗಳು ಗಣನೀಯವಾಗಿ ಇಳಿಕೆಯಾಗಲಿವೆ.

ಯಾವ ಮದ್ಯಕ್ಕೆ ಎಷ್ಟು ದರ ಇಳಿಕೆ ಆಗಲಿದೆ ಎಂಬ ಸರ್ಕಾರಿ ಆದೇಶ ಇನ್ನು ಎರಡು-ಮೂರು ದಿನಗಳಲ್ಲಿ ಹೊರಬರಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಕರ್ನಾಟಕಕ್ಕಿಂತ ಮಹಾರಾಷ್ಟ್ರ ಮತ್ತು ಗೋವಾದಲ್ಲಿ ಮದ್ಯದ ದರ ಕಡಿಮೆ ಇರುವುದರಿಂದ ಆ ರಾಜ್ಯಗಳಿಂದ ಯಥೇಚ್ಛವಾಗಿ ಕಳ್ಳ ಮಾರ್ಗದಲ್ಲಿ ರಾಜ್ಯಕ್ಕೆ ಮದ್ಯ ರವಾನೆ ಆಗುತ್ತಿತ್ತು.

ಮಧ್ಯಮ ವರ್ಗದವರು ಸೇವನೆ ಮಾಡುವ ಮದ್ಯವೇ ಅಪಾರ ಪ್ರಮಾಣದಲ್ಲಿ ಸೆಕೆಂಡ್ಸ್ ಅಲ್ಲದೆ, ಹೊರ ರಾಜ್ಯಗಳಿಂದ ಕಳ್ಳ ಸಾಗಣೆ ಆಗುವುದರಿಂದ ಇಲ್ಲಿನ ಮದ್ಯಗಳ ಬೇಡಿಕೆ ಕುಂಠಿತಗೊಂಡಿತ್ತು. ಇದನ್ನು ತಡೆಗಟ್ಟುವ ಉದ್ದೇಶದಿಂದ ಸರ್ಕಾರ ಸ್ಲ್ಯಾಬ್‌ಗಳಲ್ಲಿ ಇಳಿಕೆ ಮಾಡಿ ಸೋರಿಕೆ ತಡೆಗಟ್ಟುವ ಮೂಲಕ ಬೊಕ್ಕಸಕ್ಕೆ ಆದಾಯ ತರಲು ಮುಂದಾಗಿದೆ.

ಮದ್ಯ ಸನ್ನದುದಾರರ ವಿವಿಧ ಒಕ್ಕೂಟಗಳು 18ರಷ್ಟು ಇರುವ ದರದ ಸ್ಲ್ಯಾಬ್‌ಗಳನ್ನು 12ಕ್ಕೆ ಇಳಿಸುವಂತೆ ಒತ್ತಡ ತಂದಿದ್ದವು.

ಸ್ಲ್ಯಾಬ್‌ಗಳ ಇಳಿಕೆಯಿಂದ ಸೆಕೆಂಡ್ಸ್ ಹಾವಳಿ ತಡೆಗಟ್ಟಬಹುದು ಮತ್ತು ಕರ್ನಾಟಕದಲ್ಲಿ ಉತ್ಪಾದನೆಯಾಗಿ ತೆರಿಗೆ ಪಾವತಿಸುವ ಮದ್ಯಗಳ ಮಾರಾಟ ಹೆಚ್ಚಾಗುತ್ತದೆ, ಇದರಿಂದ ವಾರ್ಷಿಕ ಸಂಪನ್ಮೂಲ ಶೇಕಡ 30ರಿಂದ 50ರಷ್ಟು ಹೆಚ್ಚಬಹುದೆಂದು ಒಕ್ಕೂಟಗಳು ತಿಳಿಸಿದ್ದವು.

**ಶಿವಯೋಗಪ್ಪ ಎಂ.ಪಿ. ನಿಧನ**



ದಾವಣಗೆರೆ ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತ, 7ನೇ ಕ್ರಾಸ್ ವಾಸಿ, ನಗರ ಪಾಲಿಕೆ ನಿವೃತ್ತ ಮ್ಯಾನೇಜರ್

**ಶಿವಯೋಗಪ್ಪ ಎಂ.ಪಿ. ನಿಧನ**

ಇವರು ದಿನಾಂಕ 07.8.2024ರ ಬುಧವಾರ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 82 ವರ್ಷ ವಯಸ್ಸಾಗಿತ್ತು. ಪತ್ನಿ, ಮಕ್ಕಳು, ಅಳಿಯಂದಿರು, ಸೊಸೆಯಂದಿರು ಮತ್ತು ಮರಿ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಶಾಮನೂರು ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ದಿನಾಂಕ 7.8.2024ರಂದು ಸಾಯಂಕಾಲ 5 ಗಂಟೆಗೆ ನೆರವೇರಿಸಲಾಯಿತು.

ಇಂತಿ ದುಃಖ ತಪ್ತ ಕುಟುಂಬ ವರ್ಗ :
94806 52219, 86186 90534



**ಭಾವಪೂರ್ಣ ಶ್ರದ್ಧಾಂಜಲಿ**

**ವೀರಣ್ಣ ಭರಮಶೆಟ್ಟೆಪ್ಪ ಅಂಗಡಿ**

ಇವರು ದಿನಾಂಕ 07.08.2024 ರಂದು ನಿಧನರಾಗಿದ್ದು, ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ, ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ರಾಕೇಶ್ ಏಜೆನ್ಸೀಸ್ (B.C. ಪ್ರಕಾಶ) ದಾವಣಗೆರೆ. 98440 62766



**4ನೇ ವರ್ಷ ಪುಣ್ಯಸ್ಮರಣೆ**

**ಶ್ರೀ ಕೆ. ಇಂದ್ರೇಶ್**

ನಿವೃತ್ತ A.S.I

ಸಿದ್ದವೀರಪ್ಪ ಬಡಾವಣೆ, 3ನೇ ಕ್ರಾಸ್, ದಾವಣಗೆರೆ

ಜನನ : 15.4.1956, ನಿಧನ : 8.8.2021

ನಿಮ್ಮ ನೆನಪು ಎಂದೆಂದಿಗೂ ಅಜರಾಮರ
ನಿಮ್ಮ ನೆನಪು ಸದಾ ಜೀವಂತ...

**ದುಃಖತಪ್ತರು : ಪತ್ನಿ, ಮಕ್ಕಳು ಮತ್ತು ಮೊಮ್ಮಕ್ಕಳು**

**ವೀರಣ್ಣ ಭ. ಅಂಗಡಿ ನಿಧನ**



ರಾಣೇಬೆನ್ನೂರು ನಿವಾಸಿ ವರ್ತಕರಾದ ವೀರಣ್ಣ ಭ. ಅಂಗಡಿ (74) ಇವರು ದಿನಾಂಕ 7.8.2024ರ ಬುಧವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 8.8.2024ರ ಗುರುವಾರ ಬೆಳಿಗ್ಗೆ 11 ಗಂಟೆಗೆ ರಾಣೇಬೆನ್ನೂರು ದೇವರಗುಡ್ಡ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನಡೆಯಲಿದೆ.

# ವಿದ್ಯುತ್ ಸ್ಪರ್ಶ : ತಂದೆ - ಮಗನ ಸಾವು

ರಾಣೇಬೆನ್ನೂರು, ಆ. 7- ತಾಲ್ಲೂಕಿನ ಪತ್ತೇಪುರ ಗ್ರಾಮದಲ್ಲಿ ವಿದ್ಯುತ್ ತಗುಲಿ ತಂದೆ ಮಗ ಸಾವನ್ನಪ್ಪಿದ ದುರಾದೃಷ್ಟ ಘಟನೆ ಇಂದು ಬೆಳಿಗ್ಗೆ ನಡೆದಿದೆ.



ಭತ್ತದ ಬೆಳೆಗೆ ನೀರು ಹಾಯಿಸಲು ಹೊಲಕ್ಕೆ ತೆರಳಿದ ತಂದೆ ಕರಬಸಪ್ಪ ಕಡೇನಾಯ್ಕನಹಳ್ಳಿ ಹಾಗೂ ಮಗ ದರ್ಶನ್ ಅವರುಗಳು ಮೋಟಾರು ಚಾಲೂ ಮಾಡುತ್ತಿದ್ದಂತೆ ವಿದ್ಯುತ್ ತಗಲಿ ಒಬ್ಬರ ಮೇಲೊಬ್ಬರು ಬಿದ್ದು ಮೃತಪಟ್ಟಿದ್ದಾರೆ. ಹಲಗೇರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಶಾಸಕರ ಭೇಟಿ:** ಶಾಸಕ ಪ್ರಕಾಶ ಕೋಳಿವಾಡ ಅವರು ಅಧಿಕಾರಿಗಳೊಂದಿಗೆ ದುರ್ದೈವಿಗಳ ಮನೆಗೆ ತೆರಳಿ ಕುಟುಂಬದವರಿಗೆ ಸಾಂತ್ವನ ಹೇಳಿ, ಸರ್ಕಾರದ ಸಹಾಯ ಕುರಿತು ಪ್ರಯತ್ನ ನಡೆಸುವುದಾಗಿ ತಿಳಿಸಿದರು.

# ರಾಜ್ಯಸಭೆಯ 12 ಸ್ಥಾನಗಳಿಗೆ ಚುನಾವಣೆ

**(1ನೇ ಪುಟದಿಂದ)** ರಾಜ್ಯಸಭೆಯಿಂದ ಈ ಹಿಂದೆ ಆಯ್ಕೆಯಾಗಿದ್ದ ಕೇಂದ್ರ ಸಚಿವರಾದ ಪಿಯೂಷ್ ಗೋಯಲ್, ಸರ್ಬಾನಂದ ಸೋನಾವಲ್ ಹಾಗೂ ಜ್ಯೋತಿರಾದಿತ್ಯ ಸಿಂಧಿಯಾ ಸೇರಿದಂತೆ ಹತ್ತು ಜನ ಲೋಕಸಭೆಗೆ ಆಯ್ಕೆಯಾಗಿದ್ದರು. ಇದರ ಜೊತೆ ತೆಲಂಗಾಣ ಹಾಗೂ ಒಡಿಸ್ಸಾದ ಎರಡು ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

## ಇಂದು ವ್ಯಸನ ಮುಕ್ತ ಶಿಬಿರ, ಕ್ವಿಟ್ ಇಂಡಿಯಾ ಚಳವಳಿ ನೆನಪು ಕಾರ್ಯಕ್ರಮ

ಮದ್ಯಪಾನ ಸಂಯಮ ಮಂಡಳಿ, ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಚಿಗಟೇರಿ ಜಿಲ್ಲಾ ಆಸ್ಪತ್ರೆ, ಎನ್.ಎಸ್.ಎಸ್. ಘಟಕ, ಗ್ರಾಮ ಸ್ವರಾಜ್ ಅಭಿಯಾನ, ಭಾರತ್ ಸೇವಾದಳ ಇವರ ಸಂಯುಕ್ತಾಶ್ರಯದಲ್ಲಿ ಇಂದು ರಾಮನಗರದಲ್ಲಿನ ಗಾಂಧಿ ಭವನದಲ್ಲಿ ಬೆಳಗ್ಗೆ 9 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವ್ಯಸನ ಮುಕ್ತ ದಿನಾಚರಣೆ ಅಂಗವಾಗಿ ವ್ಯಸನ ಮುಕ್ತ ಶಿಬಿರ ಮತ್ತು ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಕ್ವಿಟ್ ಇಂಡಿಯಾ ಚಳುವಳಿ ಒಂದು ನೆನಪು ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಅವರು ಬೆಳಗ್ಗೆ 11 ಗಂಟೆಗೆ ಕಾರ್ಯಕ್ರಮ ಉದ್ಘಾಟಿಸುವರು. ಪಾಲಿಕೆ ಮೇಯರ್ ವಿನಾಯಕ್ ಜಿ.ಹೆಚ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್, ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಷಣ್ಮುಖಪ್ಪ, ಜಿಲ್ಲಾ ಸರ್ಜನ್ ಡಾ. ನಾಗೇಂದ್ರಪ್ಪ, ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿ ಡಾ. ಮಂಜುನಾಥ ಪಾಟೀಲ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ನಿವೃತ್ತ ಪ್ರಾಂಶುಪಾಲ ದಾದಾಪೀರ್ ನವಿಲೇಹಾಳ್ ಕ್ವಿಟ್ ಇಂಡಿಯಾ ಚಳುವಳಿ ಕುರಿತು ಉಪನ್ಯಾಸ ನೀಡುವರು.

## ವಿನೇಶ್ ಅನರ್ಹತೆ ವಿರುದ್ಧ ಆಕ್ಷೇಪ ದಾಖಲು

ನವದೆಹಲಿ, ಆ. 7 - ಭಾರತೀಯ ಕುಸ್ತಿ ಪಟು ವಿನೇಶ್ ಫೋಗಟ್ ಅವರನ್ನು ಅನರ್ಹಗೊಳಿಸಿರುವುದರ ವಿರುದ್ಧ ವಿಶ್ವ ಕುಸ್ತಿ ಒಕ್ಕೂಟದ ಬಳಿ ಭಾರತೀಯ ಒಲಂಪಿಕ್ ಒಕ್ಕೂಟ ತೀವ್ರ ಆಕ್ಷೇಪ ದಾಖಲಿಸಿದೆ. ಲೋಕಸಭೆಯಲ್ಲಿ ಈ ಬಗ್ಗೆ ವಿವರ ನೀಡಿರುವ ಕೇಂದ್ರ ಸಚಿವ ಮನ್‌ಸುಖ್ ಮಾಂಡವೀಯ, ಫೋಗಟ್ ಅವರಿಗೆ ಅಗತ್ಯವಾದ ಎಲ್ಲ ನೆರವನ್ನು ಸರ್ಕಾರ ಒದಗಿಸಿತ್ತು ಎಂದರು. ಸರ್ಕಾರದ ಉತ್ತರದಿಂದ ತೃಪ್ತವಾಗದ ಕಾಂಗ್ರೆಸ್, ತೃಣ ಮೂಲ ಕಾಂಗ್ರೆಸ್ ಹಾಗೂ ಸಮಾಜವಾದಿ ಪಕ್ಷ ಸೇರಿದಂತೆ ಪ್ರತಿಪಕ್ಷಗಳು ಸಭಾ ತ್ಯಾಗ ಮಾಡಿದವು.

# ವಿಕಲಚೇತನರು ಕೀಳರಿಮೆ ತೊರೆದು ಸಾಧನೆ ಮಾಡಬೇಕು

### ಜಗಳೂರಿನ ಕಾರ್ಯಕ್ರಮದಲ್ಲಿ ಶಾಸಕ ದೇವೇಂದ್ರಪ್ಪ ಕರೆ



ಜಗಳೂರು, ಆ. 7 - ವಿಕಲಚೇತನರು ಕೀಳರಿಮೆ ತೊರೆದು ಆಸಕ್ತಿದಾಯಕ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಬೇಕು ಎಂದು ಶಾಸಕ ಬಿ.ದೇವೇಂದ್ರಪ್ಪ ತಿಳಿಸಿದರು.

ಇಲ್ಲಿನ ಗುರುಭವನದಲ್ಲಿ ವಿಕಲಚೇತನರ ಅಭಿವೃದ್ಧಿ ಸಂಘದ ವಾರ್ಷಿಕೋತ್ಸವ ಹಾಗೂ ಗಣ್ಯರಿಗೆ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದ ಪ್ರತಿಯೊಬ್ಬರ ವಿಕಲಚೇತನರ ಕಾಳಜಿ ವಹಿಸಬೇಕು. ಅವರ ಭಾವನೆಗಳಿಗೆ ಸ್ಪಂದಿಸಿ ಸಹಾಯಸ್ತ ಚಾಚಬೇಕು ಎಂದು ಕಿವಿಮಾತು ಹೇಳಿದರು.

ಹುಟ್ಟುತ್ತಲೇ ಅಂಧರಾಗಿದ್ದ ಪಂಡಿತ ಗಾನಗಂಧರ್ವ ಪುಟ್ಟರಾಜ ಗವಾಯಿಯವರು ಸಾಧನೆಗೆ ಅಂಗವೈಕಲ್ಯತೆ ಅಡ್ಡಿಯಲ್ಲ ಎಂಬುದನ್ನು ಸಾಧಿಸಿ ತೋರಿಸಿ ಸಮಾಜಕ್ಕೆ ಸ್ಫೂರ್ತಿಯಾಗಿದ್ದರು ಎಂದರು.

ತಾಲ್ಲೂಕಿನ ವಿಕಲಚೇತನರ ಶ್ರೇಯೋಭಿವೃದ್ದಿಗೆ ಸದಾ ಬದ್ದನಾಗಿರುವೆ ಎಂದು ಭರವಸೆ ನೀಡಿದ ಅವರು, ಗ್ರಾಮೀಣ ಭಾಗದಲ್ಲಿ ಆಶಾ, ಅಂಗನವಾಡಿ ಕಾರ್ಯಕರ್ತೆಯರು ವಿಕಲಚೇತನರನ್ನು ಗುರುತಿಸಿ ಸರ್ಕಾರದ ಸೌಲಭ್ಯಗಳನ್ನು ಒದಗಿಸಲು ಮುಂದಾಗಬೇಕು. ಜೊತೆಗೆ ನಾನು ವೈಯಕ್ತಿಕವಾಗಿ ಸಹಾಯಧನ ನೀಡುವ ವಿಶ್ವಾಸ ವ್ಯಕ್ತಪಡಿಸಿದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ವಿಜಯ ಕುಮಾರ್ ಸಂತೋಷ್ ಮಾತನಾಡಿ, ವಿಕಲ ಚೇತನರನ್ನು ಸರಪಳಿಯಿಂದ ಬಂಧನದಲ್ಲಿಡುವ, ಪೋಷಕರೇ ಹತ್ಯೆಗೈಯುವ, ಅನಿಷ್ಠ ಪದ್ದತಿ ಸಮಾಜದಲ್ಲಿ ಜೀವಂತವಾಗಿತ್ತು. ದೇಶದಲ್ಲಿ 2016 ರಲ್ಲಿ ಜಾರಿಗೊಂಡ ವಿಕಲಚೇತನರ ಕಾಯ್ದೆ ಜಾರಿಯಾದ ನಂತರ ಕ್ರಮೇಣವಾಗಿ ವಿಕಲಚೇತನರ ರಕ್ಷಣೆ ಮತ್ತು ಹಕ್ಕುಗಳು, ಸರ್ಕಾರಿ ಸೌಲಭ್ಯಗಳು ಸಿಗುತ್ತಿವೆ.ನನ್ನ ಪುತ್ರನೂ ಕೂಡ ವಿಕಲಚೇತನನಾಗಿ ಜನಿಸಿದ್ದು, ಅವನನ್ನು ತಾತ್ಸರ ಮಾಡದೆ ಗೌರವದಿಂದ ಪೋಷಣೆ, ಪಾಲನೆ ಮಾಡುತ್ತಾ ದೈವ ಸ್ವರೂಪವಾಗಿ ಕಾಣುತ್ತಿದ್ದೇವೆ ಎಂದು ಭಾವುಕರಾದರು.

ವಿಕಲಚೇತನರ ಅಭಿವೃದ್ದಿ ಸಂಘದ ರಾಜ್ಯಾಧ್ಯಕ್ಷ ಮಹಾಂತೇಶ್ ಬ್ರಹ್ಮ ಮಾತನಾಡಿ, ತಾಲ್ಲೂಕಿನಲ್ಲಿ ವಿಕಲಚೇತನರ ಸಮಸ್ಯೆಗಳನ್ನು ಅರಿತು ವಿಕಲಚೇತನರ ಅಭಿವೃದ್ದಿ ಸಂಘ ಸ್ಥಾಪಿಸಿ ವಿಕಲಚೇತನರ ಹಕ್ಕುಗಳು ಮತ್ತು ಸೌಲಭ್ಯಗಳ ಸೇವೆಗಾಗಿ ಕೆಲಸ ಮಾಡಿರುವೆ. ವಿವಿಧ ಇಲಾಖೆಗಳ ಸಹಯೋಗದಲ್ಲಿ ವಿಕಲ ಚೇತನರಿಗೆ ಜಾಗೃತಿಕಾರ್ಯಕ್ರಮ, ಸಾಧನ ಸಲಕರಣೆ ವಿತರಣೆ, ರ‍್ಯಾಂಪ್ ವ್ಯವಸ್ಥೆ. ಯುಡಿಐಡಿ ಕಾರ್ಡ್‌ಗಳನ್ನು ಸ್ಥಳೀಯವಾಗಿ ವಿತರಿಸಲಾಗುತ್ತಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಶಾಸಕ ಬಿ.ದೇವೇಂದ್ರಪ್ಪ ಅವರಿಗೆ 'ರೈತಮಿತ್ರ, 'ಕೆಪಿಸಿಸಿ ಎಸ್ ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ ಅವರಿಗೆ 'ಯುವರತ್ನ', ಆರೈಕೆ ಆಸ್ಪತ್ರೆಯ ಡಾ.ರವಿಕುಮಾರ್ ಅವರಿಗೆ 'ಆರೋಗ್ಯಮಿತ್ರ', ಸಮಾಜ ಕಲ್ಯಾಣ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಬಿ.ಮಹೇಶ್ವರಪ್ಪ ಅವರಿಗೆ 'ಸಮಾಜರತ್ನ', ಸಂಪಾದಕ ಸಿ.ತಿಪ್ಪೇಸ್ವಾಮಿ ಅವರಿಗೆ 'ಪತ್ರಿಕಾ ಸೇವಾ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ತಹಶಿಲ್ದಾರ್ ಕಲೀಮ್‌ಉಲ್ಲಾ, ಪ.ಪಂ ಸದಸ್ಯ ಆರ್. ತಿಪ್ಪೇಸ್ವಾಮಿ, ಪ.ಪಂ ಮುಖ್ಯಾಧಿಕಾರಿ ಲೋಕ್ಯಾನಾಯ್ಕ,ಬಿಇಓ ಹಾಲಮೂರ್ತಿ, ಗ್ರಾ.ಪಂ. ಅಧ್ಯಕ್ಷರಾದ ಅಶ್ವಿನಿ ಅಂಜಿನಪ್ಪ, ಕೃಷಿ ಇಲಾಖೆ ಸಹಾಯಕ ನಿರ್ದೇಶಕರಾದ ಶ್ವೇತಾ, ನಮ್ಮ ಕರ್ನಾಟಕ ಸೇನೆಯ ಜಯಲಕ್ಷ್ಮಿ, ಸುಜಾತ, ಮಂಜುಳಾ, ಸತೀಶ್, ತಿಪ್ಪೇಸ್ವಾಮಿ ಮುಂತಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ನಾಳೆ ದತ್ತಿ ಉಪನ್ಯಾಸ ಕಾರ್ಯಕ್ರಮ

ದಾವಣಗೆರೆ, ಆ.7- ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ಹಿರಿಯ ನಾಗರಿಕ ಸಹಾಯ ವಾಣಿ ಹಾಗೂ ಎ.ಆರ್.ಜಿ ಪದವಿ ಪೂರ್ವ ಕಾಲೇಜಿನ ಸಹಯೋಗದಲ್ಲಿ ಕಾಲೇಜಿನ ಸಭಾಂಗಣದಲ್ಲಿ ನಾಡಿದ್ದು ದಿನಾಂಕ 9ರ ಶುಕ್ರವಾರ ಬೆಳಗ್ಗೆ 11ಕ್ಕೆ 'ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ' ಕಾರ್ಯಕ್ರಮ ನಡೆಯಲಿದೆ.

ಕಾಲೇಜಿನ ಪ್ರಾಚಾರ್ಯ ಕೆ.ಬೊಮ್ಮಣ್ಣ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದ್ದು, 'ಉತ್ತಮ ವ್ಯಕ್ತಿತ್ವ ರೂಪಿಸುವಲ್ಲಿ ವಚನ ಸಾಹಿತ್ಯದ ಪಾತ್ರ' ವಿಷಯ ಕುರಿತು ಭರಮಣ್ಣ ಮೈಸೂರು ಉಪನ್ಯಾಸ ನೀಡಲಿದ್ದಾರೆ.

ಕಸಾಪ ತಾಲ್ಲೂಕು ನಿರ್ದೇಶಕ ಷಡಾಕ್ಷರಪ್ಪ ಎಂ. ಬೇತೂರು, ಜಿಲ್ಲಾ ಗೌರವ ಕಾರ್ಯದರ್ಶಿ ಬಿ. ದಿಳ್ಯಪ್ಪ, ಆರ್. ಶಿವಕುಮಾರ್, ನವೀನ್ ಕುಮಾರ್ ಮತ್ತು ಸುಮತಿ ಜಯ್ಯಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

## ನಗರದಲ್ಲಿ ಇಂದು ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆ

ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ನಡೆಯಲಿದೆ.

# ಮಕ್ಕಳು ಹಳ್ಳಿ ವಾತಾವರಣ ಆನಂದಿಸಬೇಕು

### ಹಳ್ಳಿ ಸೊಗಡಿನ ಗ್ರಾಮೋತ್ಸವ ಕಾರ್ಯಕ್ರಮದಲ್ಲಿ ಕೆ. ಪ್ರವೀಣ



ದಾವಣಗೆರೆ, ಆ. 8 - ಮಕ್ಕಳು ರಜಾ ದಿನಗಳಲ್ಲಿ ಅಜ್ಜ-ಅಜ್ಜಿ ಮನೆಗೆ ಹೋಗಿ ಹಳ್ಳಿಯ ಸುಂದರ ವಾತಾವರಣವನ್ನು ಆನಂದಿಸಬೇಕು ಎಂದು ದಾವಣಗೆರೆ ಸ್ವದೇಶ ಕಂಪನಿ ಕಾರ್ಯನಿರ್ವಾಹಕ ಅಧಿಕಾರಿ ಕೆ. ಪ್ರವೀಣ ವಿದ್ಯಾರ್ಥಿಗಳಿಗೆ ಹೇಳಿದರು.

ನಗರದ ಬಾಪೂಜಿ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಜರುಗಿದ ಹಳ್ಳಿ ಸೊಗಡಿನ ಗ್ರಾಮೋತ್ಸವ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿ, ಶಾಲೆಯಲ್ಲಿ ವಿದ್ಯಾರ್ಥಿಗಳು ಬಣ್ಣ ಬಣ್ಣದ ವಸ್ತ್ರಗಳನ್ನು ಧರಿಸಿ, ಹಳ್ಳಿಯ ವಾತಾವರಣವನ್ನು ಅನಾವರಣ ಗೊಳಿಸಿರುವುದು ನಿಜಕ್ಕೂ ಸಂತಸದ ವಿಷಯವಾಗಿದೆ. ಗ್ರಾಮೀಣ ಸಂಸ್ಕೃತಿಯನ್ನು ನೆನಪು ಮಾಡಿದ್ದಕ್ಕೆ ಧನ್ಯವಾದ ಹೇಳಿದರು.

ಶಾಲಾ ಮುಖ್ಯಸ್ಥರಾದ ಮಂಜುನಾಥ ರಂಗರಾಜು ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಯೂ ಶಾಲೆಯಲ್ಲಿ ಪಾಠಕ್ಕೆ ಸೀಮಿತವಾಗದೇ, ದೇಶದ ಸಂಸ್ಕೃತಿಯನ್ನು ಬಿಂಬಿಸುವಂತಹ ಹಳ್ಳಿ ಸೊಗಡಿನ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ಎಂದು ವಿದ್ಯಾರ್ಥಿಗಳಿಗೆ ಹೇಳಿದರು.

ಶಾಲಾ ಪ್ರಾಂಶುಪಾಲರಾದ ಜೆ.ಎಸ್. ವನಿತಾ ಮಾತನಾಡಿ, ಹಳ್ಳಿ ಸೊಗಡನ್ನು ಬಿಂಬಿಸುವಂತಹ ಕಾರ್ಯಕ್ರಮಗಳು ಇಂದಿನ ಮಕ್ಕಳಿಗೆ ಅವಶ್ಯಕ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಕೋಲು ಕುಣಿತ, ಕೋಲಾಟ, ಕಂಸಾಳೆ, ವೀರಗಾಸೆ, ಮಲೆ ಮಾದೇಶ್ವರನ ಹಾಡು, ರೈತರು ಒಕ್ಕಲು ಮಾಡುವ ಗೀತೆಗಳು, ಜಾನಪದ ಹಾಗೂ ಸುಗ್ಗಿ ಹಾಡು, ನೃತ್ಯಗಳೊಂದಿಗೆ ಸಾಂಸ್ಕೃತಿಕ ಮನರಂಜನೆ ನೀಡಿದರು.

ಕಾರ್ಯಕ್ರಮದಲ್ಲಿ ಶೈಕ್ಷಣಿಕ ಮುಖ್ಯಸ್ಥ ವಾಸಿಮ್ ಪಾಷಾ.ಎಂ, ಪ್ರಾಥಮಿಕ ವಿಭಾಗದ ಮುಖ್ಯಸ್ಥೆ ಶೀಭಾರಾಣಿ, ಪ್ರಭು ಪಿ.ವಿ, ಸವಿತಾ. ಆರ್ ಶಿಕ್ಷಕ ವರ್ಗದವರು ಉಪಸ್ಥಿತರಿದ್ದರು.

# ಮೈಸೂರಲ್ಲಿ ಸಿದ್ದು ಶಕ್ತಿ-ಸಂದೇಶ

(1ನೇ ಪುಟದಿಂದ) ಸಿದ್ಧಪಡಿಸಿರುವ ವೇದಿಕೆ ಮೂಲಕ ಬಿಜೆಪಿ ಮತ್ತು ಜೆಡಿಎಸ್ ಆಡಳಿತದಲ್ಲಿ ನಡೆದ ಬ್ರಹ್ಮಾಂಡ ಭ್ರಷ್ಟಾಚಾರಗಳನ್ನು ಜನರ ಮುಂದಿಡಲು ಹಾಗೂ ತಮ್ಮ ಮೇಲಿರುವ ಆರೋಪದಲ್ಲಿ ಹುರುಳಿಲ್ಲ ಎಂಬುದನ್ನು ಸಾಬೀತು ಪಡಿಸಲು ಸಿದ್ದರಾಮಯ್ಯ ಮುಂದಾಗಿದ್ದಾರೆ.

ಇತ್ತೀಚೆಗೆ ರಾಜ್ಯದಲ್ಲಿ ಕೋಮುವಾದಿಗಳು ಮತ್ತು ಜಾತಿವಾದಿ ಪಟ್ಟಭದ್ರ ಹಿತಾಸಕ್ತಿಗಳು ಅಧಿಕಾರದ ಖುರ್ಚಿ ಆಸೆಗಾಗಿ ಜನಪರ ಇರುವ ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸಲು ಯತ್ನಿಸುತ್ತಿವೆ ಎಂದು ಅವರ ಅಭಿಮಾನಿಗಳು ಮತ್ತು ಸಂಘಟನೆಗಳು ಆರೋಪಿಸಿವೆ.

ಸಿದ್ದರಾಮಯ್ಯ ವಿರುದ್ಧ ಬಿಜೆಪಿ ಮತ್ತು ಜೆಡಿಎಸ್ ನಾಯಕರು ದೊಡ್ಡ ಮಟ್ಟದ ಷಡ್ಯಂತ್ರ ರೂಪಿಸಿದ್ದಾರೆ. ಮುಖ್ಯಮಂತ್ರಿಯಾಗಿ, ಉಪಮುಖ್ಯಮಂತ್ರಿಯಾಗಿ 15 ಬಾರಿ ರಾಜ್ಯ ಬಜೆಟ್ ಮಂಡಿಸಿರುವ, 40 ವರ್ಷಗಳ ಸುದೀರ್ಘ ರಾಜಕೀಯದಲ್ಲಿ ಹಲವು ಮಹತ್ವದ ಅಧಿಕಾರದ ಹುದ್ದೆಯಲ್ಲಿದ್ದರೂ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲದ ನಾಯಕನ ವರ್ಚಸ್ಸಿಗೆ ಮಸಿ ಬಳಿಯಲು ಹೊರಟಿದ್ದಾರೆ. ಸಿದ್ದರಾಮಯ್ಯ ಅವರನ್ನು ರಾಜಕೀಯವಾಗಿ ಮುಗಿಸಿಯೇ ಬಿಡುವ ಹುನ್ನಾರ ಮಾಡುತ್ತಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್ ರಾಜ್ಯ ನಾಯಕರ ಕುತಂತ್ರಕ್ಕೆ ಆ ಪಕ್ಷದ ರಾಷ್ಟ್ರೀಯ ನಾಯಕರೂ ಕುಮ್ಮಕ್ಕು ನೀಡಿ, ರಾಜ್ಯಪಾಲರನ್ನು ಬಳಸಿಕೊಂಡು ಅಧಿಕಾರದಿಂದ ಕೆಳಗಿಳಿಸಲು ಹೊರಟಿದ್ದಾರೆ.

ಬಿಜೆಪಿಯ ರಾಷ್ಟ್ರೀಯ ನಾಯಕರಾದ ಪ್ರಧಾನಿ ನರೇಂದ್ರ ಮೋದಿ, ಅಮಿತ್ ಷಾ, ಬಿ.ಎಲ್. ಸಂತೋಷ್, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ವಿಧಾನಸಭೆಯಲ್ಲಿನ ಪ್ರತಿಪಕ್ಷ ನಾಯಕ ಆರ್. ಅಶೋಕ್, ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತಿತರರು ಸಿದ್ದರಾಮಯ್ಯ ಅವರನ್ನು ರಾಜಕೀಯವಾಗಿ ಮುಗಿಸಲು ಹೊರಟಿದ್ದಾರೆ ಎಂದು ಆರೋಪಿಸಲಾಗುತ್ತಿದೆ.

ಇಂತಹ ಹಿಂದುಳಿದ, ದಲಿತ, ಅಲ್ಪಸಂಖ್ಯಾತ, ಶೋಷಿತರ ವಿರೋಧಿಗಳಿಗೆ ತಕ್ಕ ಪಾಠ ಕಲಿಸುವ ಅನಿವಾರ್ಯತೆ ರಾಜ್ಯದಲ್ಲಿ ನಿರ್ಮಾಣವಾಗಿದೆ, ಆದ್ದರಿಂದ ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದಿದ್ದಾರೆ.

## ಅರಸು ಜನ್ಮ ದಿನಾಚರಣೆ: ಡಿಸಿ ಕಛೇರಿಯಲ್ಲಿ ಇಂದು ಸಭೆ

ಇದೇ ದಿನಾಂಕ 20ರಂದು ಜರುಗಲಿರುವ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ್ ಅರಸು 109ನೇ ಜನ್ಮ ದಿನಾಚರಣೆ ಅಂಗವಾಗಿ ಇಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಆಯೋಜಿಸಲಾಗಿದೆ.

# 'ಇ-ಸ್ವತ್ತಿ'ಗೆ ಅಲೆದಾಡಿಸಬೇಡಿ : ಅಧಿಕಾರಿಗಳಿಗೆ ತಾಕೀತು

### ನರಗನಹಳ್ಳಿ ಗ್ರಾಮ ಪಂಚಾಯಿತಿಗೆ ಶಾಸಕ ಕೆ.ಎಸ್.ಬಸವಂತಪ್ಪ ಭೇಟಿ



ದಾವಣಗೆರೆ, ಆ. 7 - ಗ್ರಾಮೀಣ ಜನರ ಸಮಸ್ಯೆಗಳಿಗೆ ಪರಿಹಾರ ಹಾಗೂ ಗ್ರಾಮಗಳ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿರುವುದು ಗ್ರಾ.ಪಂ. ಆಡಳಿತ ಮತ್ತು ಅಧಿಕಾರಿಗಳ ಕರ್ತವ್ಯವಾಗಿದೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಾಯಕೊಂಡ ಕ್ಷೇತ್ರ ವ್ಯಾಪ್ತಿಯ ನಗರನಹಳ್ಳಿ ಗ್ರಾಮ ಪಂಚಾಯತಿ ಕಚೇರಿಗೆ ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಗ್ರಾಮಸ್ಥರ ಸಮಸ್ಯೆ ಆಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಇ-ಸ್ವತ್ತು ಮಾಡಿಕೊಡಲು ಕಚೇರಿಗೆ ಅಲೆದಾಡಿಸಲಾಗುತ್ತಿದೆ ಎಂಬ ಆರೋಪಗಳು ಕೇಳಿ ಬರುತ್ತಿವೆ. ಯಾವುದೇ ಕಾರಣಕ್ಕೂ ಅಲೆದಾಡಿಸುವ ಕೆಲಸ ಮಾಡಬಾರದು. ಅವರು ಅರ್ಜಿ ಸಲ್ಲಿಸಿ ನೀವು ನಿಗದಿಪಡಿಸಿದ ದಿನಗಳೊಳಗೆ ಅರ್ಜಿ ವಿಲೇವಾರಿ ಮಾಡಿ ಇ-ಸ್ವತ್ತು ಮಾಡಿಕೊಡಬೇಕೆಂದು ತಾಕೀತು ಮಾಡಿದರು.

ಉದ್ಯೋಗ ಖಾತ್ರಿಯಡಿ ಕೈಗೊಂಡ ಯಾವುದೇ ಕಾಮಗಾರಿಗಳು ವಿಳಂಬ ಮಾಡಬಾರದು. ಕೈಗೆತ್ತಿಕೊಂಡ ಕಾಮಗಾರಿಗಳನ್ನು ನಿಗದಿಪಡಿಸಿದ ಅವಧಿಯೊಳಗೆ ಪೂರ್ಣಗೊಳಿಸಬೇಕು. ರೈತರನ್ನು ಅಲೆದಾಡಿಸುವುದು ನನ್ನ ಗಮನಕ್ಕೆ ಬಂದರೆ ನಿಮ್ಮ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಮೇಲಾಧಿಕಾರಿಗಳಿಗೆ ಸೂಚಿಸುವುದಾಗಿ ಎಚ್ಚರಿಕೆ ನೀಡಿದರು.

ಗ್ರಾಮಗಳಲ್ಲಿ ಸ್ವಚ್ಛತೆ ಇಲ್ಲದ ಪರಿಣಾಮ ರಾಜ್ಯದಲ್ಲಿ ಡೆಂಗ್ಯೂ ಪ್ರಕರಣಗಳು ಹೆಚ್ಚಾಗುತ್ತಿವೆ. ಈ ನಿಟ್ಟಿನಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳಲ್ಲಿರುವ ಚರಂಡಿಗಳನ್ನು ಸ್ವಚ್ಛತೆಗೊಳಿಸಬೇಕು. ಸಂಜೆ ವೇಳೆ ಸೊಳ್ಳೆಗಳ ನಿರ್ಮೂಲನೆಗೆ ಫಾಗಿಂಗ್ ಮಾಡಬೇಕು.ಜೊತೆಗೆ ಗ್ರಾಮಗಳ ಸ್ವಚ್ಛತೆಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು ಎಂದು ಗ್ರಾಮ ಪಂಚಾಯತಿ ಪಿಡಿಓಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಪಿಡಿಓ ಹೇಮಂತ್‌ರಾಜ್, ಗುಮ್ಮನೂರು ಶಂಭಣ್ಣ,ಮೈಲಪ್ಪ,ರುದ್ರೇಶ್,ಜಯ್ಯಪ್ಪ,ಅಣ್ಣೇಶ್, ಮಾರುತಿ, ದೇವೇಂದ್ರಪ್ಪ, ನಸರುಲ್ಲ, ಶಿವಣ್ಣ, ಕರಿಬಸಪ್ಪ, ಬಸಣ್ಣ ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿಗಳು ಹಾಜರಿದ್ದರು.

## 10ರಂದು ವಿಕಲಚೇತನರ ಉದ್ಯೋಗ ಮೇಳ

ದಾವಣಗೆರೆ, ಆ. 7 - ಸಮರ್ಥನಂ ಅಂಗವಿಕಲರ ಸಂಸ್ಥೆ (ಬೆಂಗಳೂರು) ವತಿಯಿಂದ ವಿಕಲಚೇತನರಿಗೆ ಉದ್ಯೋಗ ಮೇಳವನ್ನು ಇದೇ ದಿನಾಂಕ 10 ರಂದು ಬೆಳಿಗ್ಗೆ 9 ಗಂಟೆಗೆ ಮೈಸೂರಿನ ಜೆ.ಎಸ್.ಎಸ್. ಪಾಲಿಟೆಕ್ನಿಕ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ವಿವರಕ್ಕೆ ಸುಭಾಷ್ (94498 64693, 94808 12121) ಅವರನ್ನು ಸಂಪರ್ಕಿಸಬಹುದೆಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಡಾ. ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

## ಇಂದು ಹೈನುಗಾರಿಕೆ ತರಬೇತಿ

ದಾವಣಗೆರೆಯ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಆಧುನಿಕ ಹೈನುಗಾರಿಕೆ ತರಬೇತಿಯು ಇಂದು - ನಾಳೆ ನಡೆಯಲಿದೆ. ಸಂಪರ್ಕಿಸಿ : 08192-233787.

## ದಾವಣಗೆರೆ ಎಪಿಎಂಸಿ ಮಕ್ಕೆಜೋಳ ವರ್ತಕರ ಸಂಘದಿಂದ ಭದ್ರೆಗೆ ಬಾಗಿನ



ದಾವಣಗೆರೆ, ಆ. 7 - ಭರ್ತಿಯಾಗಿರುವ ಭದ್ರಾ ಜಲಾಶಯಕ್ಕೆ ಈಚೆಗೆ ನಗರದ ಎಪಿಎಂಸಿ ಯಾರ್ಡ್‌ನ ಎಪಿಎಂಸಿ ಮೆಕ್ಕೆಜೋಳ ವರ್ತಕರ ಸಂಘದಿಂದ ಬಾಗಿನ ಅರ್ಪಿಸಲಾಯಿತು.

## ಬಾಂಗ್ಲಾದಂಥದ್ದು ಭಾರತದಲ್ಲೂ ನಡೆಯುಬಹುದು ಎಂದ ಖುರ್ಷೀದ್‌ಗೆ ತರಾಟೆ

ನವದೆಹಲಿ, ಆ. 7 - ಬಾಂಗ್ಲಾ ದೇಶದಂತಹ ಪರಿಸ್ಥಿತಿಯೇ ಭಾರತದಲ್ಲಿ ಆಗಬಹುದು ಎಂದು ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷೀದ್ ಹೇಳಿರುವುದನ್ನು ಬಿಜೆಪಿ ತರಾಟೆಗೆ ತೆಗೆದುಕೊಂಡಿದೆ.

ಮಂಗಳವಾರ ರಾತ್ರಿ ಪುಸ್ತಕ ಬಿಡುಗಡೆ ಸಮಾರಂಭ ಒಂದರಲ್ಲಿ ಮಾತನಾಡಿದ ಖುರ್ಷೀದ್, ಭಾರತದಲ್ಲಿ ಮೇಲ್ನೋಟಕ್ಕೆ ಎಲ್ಲವೂ ಶಾಂತವಾಗಿ ಕಾಣುತ್ತಿದೆ. ಆದರೆ ಬಾಂಗ್ಲಾದೇಶದಲ್ಲಿ ನಡೆದಿರುವಂತಹದೇ ಭಾರತದಲ್ಲಿ ನಡೆಯಬಹುದು ಎಂದು ಹೇಳಿದ್ದರು

ಈ ಬಗ್ಗೆ ನಂತರ ಮಾತನಾಡಿರುವ ಕಾಂಗ್ರೆಸ್ ನಾಯಕ ಶಶಿ ಥರೂರ್, ಖುರ್ಷೀದ್ ಹೇಳಿದ್ದು ಏನು ಎಂಬುದನ್ನು ವಿವರಿಸಲಾರೆ. ಆದರೆ ಬಾಂಗ್ಲಾದೇಶವು ಪ್ರಜಾಪ್ರಭುತ್ವ ಹಾಗೂ ಮುಕ್ತ ಚುನಾವಣೆಯ ಬಗ್ಗೆ ಸಂದೇಶ ನೀಡಿದೆ ಎಂದು ಹೇಳಿದ್ದಾರೆ.

ಬಿಜೆಪಿ ಸಂಸದ ಅನುರಾಗ ಠಾಕೂರ್ ಖುರ್ಷೀದ್ ಹೇಳಿಕೆಯನ್ನು ತರಾಟೆಗೆ ತೆಗೆದುಕೊಂಡಿದ್ದು, ಭಾರತ ಅರಾಜಕತೆಗೆ ಸಿಲುಕಲಿ ಎಂದು ಸತತ ಮೂರು ಚುನಾವಣೆಯಲ್ಲಿ ಸೋತಿರುವ ಕಾಂಗ್ರೆಸ್ ಬಯಸುತ್ತಿದೆ ಎಂದಿದ್ದಾರೆ.

ಈ ರೀತಿಯ ಅಸಂಬದ್ಧ ಹೇಳಿಕೆಗಳು ಕಾಂಗ್ರೆಸ್ ಪಕ್ಷದ ಮನೋಭಾವ ತೋರಿಸುತ್ತಿವೆ. ದೇಶವನ್ನು ಹಿಂದಕ್ಕೆ ತಳ್ಳಲು ಕಾಂಗ್ರೆಸ್ ಏನು ಬೇಕಾದರೂ ಮಾಡಲು ತಯಾರಿದೆ. ಭಾರತ ವೇಗದ ಆರ್ಥಿಕ ಬೆಳವಣಿಗೆಯ ದೇಶವಾಗಿರುವುದು ಹಾಗೂ ಉತ್ತಮ ಸ್ಥಿತಿಯಲ್ಲಿರುವುದನ್ನು ನೋಡಿ ಕಾಂಗ್ರೆಸ್ ಪಕ್ಷಕ್ಕೆ ಸಹಿಸಲು ಆಗುತ್ತಿಲ್ಲ ಎಂದಿದ್ದಾರೆ.


### ಸಾರ್ವಜನಿಕ ತಿಳುವಳಿಕೆಗಾಗಿ ನೋಟಿಸ್

ನಮ್ಮ ಕಕ್ಷಿದಾರವಾದ 1) ಸಂದೀಪ್ ತಂದೆ ಮೋಹನಲಾಲ ಜೈನ ವಯಾ : 39 ವರ್ಷ, ಉದ್ಯೋಗ : ಖಾಸಗಿ ಉದ್ಯೋಗ 2) ಜ್ಯೋತಿ ಕೋಂ ಸಂದೀಪ್ ಜೈನ್, ವಯಾ:37 ವರ್ಷ, ಉದ್ಯೋಗ: ಗೃಹಿಣಿ, ಸಾ:ದಾವಣಗೆರೆ, ಪಿ.ಜೆ, ಬಡಾವಣೆ, ನಂ.202, ಶೀತಲ್ ಪ್ಯಾರಾಡೈಸ್ ಅಪಾರ್ಟ್‌ಮೆಂಟ್, 3ನೇ ಮುಖ್ಯ ರಸ್ತೆ, 4ನೇ ಕ್ರಾಸ್, ದಾವಣಗೆರೆ-577002 ಇವರು ದಾವಣಗೆರೆ ಜಿಲ್ಲೆ, ಕಸಬಾ ಹೋಬಳಿಯಲ್ಲಿರುವ ಕುಂದವಾಡ ಗ್ರಾಮದ ರಿ.ಸ.ನಂ.160/1c, ಕ್ಷೇತ್ರ:23 ಗುಂಟೆ 08 ಆಣೆ ಪೂರ್ತಿಯಾಗಿ ಮತ್ತು ಕುಂದವಾಡ ಗ್ರಾಮದ ರಿ.ಸ. ನಂ.160/4, ಕ್ಷೇತ್ರ: 24 ಗುಂಟೆ ಮತ್ತು ಕುಂದವಾಡ ಗ್ರಾಮದ ರಿ.ಸ. ನಂ.160/5, ಕ್ಷೇತ್ರ: 23 ಗುಂಟೆ 08 ಆಣೆ ಈ ಮೂರು ಭೂಮಿಗಳು ಪರಸ್ಪರ ಅಕ್ಕಪಕ್ಕದಲ್ಲಿ ಇರುವುದರಿಂದ ಸಾಮಾನ್ಯ ಚೆಕ್ಕುಬಂದಿ ಮಧ್ಯೆದಲ್ಲಿ ಇರುತ್ತವೆ, ಅಂದರೆ ಪೂರ್ವಕ್ಕೆ: ಲಾಗು ಹಿಸ್ಸಾ ನಂ. 174, ಪಶ್ಚಿಮಕ್ಕೆ: ಲಾಗು ಹಿಸ್ಸಾ ನಂ 159, ಉತ್ತರಕ್ಕೆ: ಲಾಗು ಹಿಸ್ಸಾ ನಂ 160/1B, ದಕ್ಷಿಣಕ್ಕೆ ಲಾಗು ಹಿಸ್ಸಾ ನಂ. 160/3, ಈ ಚೆಕ್ಕಬಂದಿ ಮಧ್ಯೆದಲ್ಲಿರುವ ಆಸ್ತಿಗಳನ್ನು, ಅವುಗಳ ಈಗಿನ ಮಾಲೀಕರು ವ ಕಬ್ಜಾದಾರರಾದ 1)ನಾಗಪ್ಪ ಬಿನ್ ಹನುಮಂತಪ್ಪ ಸಿರಿನಳ್ಳಿ, 2) ಚೌಡಮ್ಮ ಕೋಂ ಹನುಮಂತಪ್ಪ 3) ಬಸವರಾಜಪ್ಪ ಬಿನ್ ಸಣ್ಣಹನುಮಂತಪ್ಪ ಸಾ: ಹಳೇ ಕುಂದುವಾಡ ತಾ: ವ ಜಿಲ್ಲಾ : ದಾವಣಗೆರೆ ಇವರಿಂದ ಖರೀದಿ ಹಿಡಿಯುವ ಕುರಿತು ಒಪ್ಪಂದ ಮಾಡಿಕೊಂಡಿದ್ದು, ಸದರ ಜಮೀನುಗಳ ಖರೀದಿ ಪತ್ರವನ್ನು ನೋಂದಾಯಿಸಿಕೊಳ್ಳುವವರಿದ್ದಾರೆ.

ಕಾರಣ, ಸಾರ್ವಜನಿಕರ ಗಮನಕ್ಕೆ ಮತ್ತು ಸದರ ಆಸ್ತಿಯಲ್ಲಿ ಯಾವುದೇ ರೀತಿಯಿಂದ ಹಿತಾಸಕ್ತಿಯುಳ್ಳಂತಹ ಜನರಿದ್ದರೆ, ಅವರ ಗಮನಕ್ಕೆ, ಈ ನೋಟಿಸಿನ ಮೂಲಕ ತಿಳಿಸುವುದೇನೆಂದರೆ, ಯಾರಾದರೂ ಯಾವುದೇ ತರಹದ ಹಕ್ಕು ಬಾಧ್ಯತೆಯನ್ನು ಸದರ ಜಮೀನುಗಳಲ್ಲಿ ಹೊಂದಿದ್ದಲ್ಲಿ, ಅದಕ್ಕೆ ಸಂಬಂಧಿಸಿದಂತೆ ಕಾಗದ ಪತ್ರಗಳ ಸಮೇತರಾಗಿ ಈ ಕೆಳಗೆ ನಮೂದಿಸಿದ ನಮ್ಮ ವಿಳಾಸದಲ್ಲಿ ನಮ್ಮನ್ನು ಸಂಪರ್ಕಿಸಿ ಆ ಬಗ್ಗೆ ಲೇಖಿ ಪಡೆಯೋಣವಾಗಬೇಕು ಮತ್ತು ಸಂಪರ್ಕಿಸುವವರು, ಯಾವ ರೀತಿಯಿಂದ ಸದರ ಆಸ್ತಿಗಳಲ್ಲಿ ಹಿತಾಸಕ್ತಿಯುಳ್ಳವರು ಇರುತ್ತಾರೆ ಅನ್ನುವ ಬಗ್ಗೆ ದಾಖಲಾತಿಗಳ ಸಹಿತವಾಗಿ ನಮಗೆ ಲೇಖಿ ಸಲ್ಲಿಸೋಣವಾಗಬೇಕು. ಒಂದು ವೇಳೆ ಯಾರಾದರೂ ಯಾವುದೇ ಆಕ್ಷೇಪಣೆ ಗಳನ್ನು ಈ ನೋಟಿಸ್ ಪ್ರಕಟಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಸಲ್ಲಿಸದಿದ್ದಲ್ಲಿ, ನಮ್ಮ ಕಕ್ಷಿದಾರರು ಸದ್ಭಾವನೆಯುಕ್ತ ಖರೀದಿದಾರರಾಗುತ್ತಾರೆ ಅಂತಾ ಪ್ರಕಟಿಸಿದ ಸಾರ್ವಜನಿಕ ನೋಟಿಸ್.

ಸಹಿ/- ಪಿ. ಆರ್. ಹಿತ್ತಲಮನಿ, ವಕೀಲರು
ನಂ.65, "ಪೃಥ್ವಿ-ದೀಪ",1ನೇ ಕ್ರಾಸ್, ರಾಜ-ರಾಜೇಶ್ವರಿ ನಗರ, ರಾಜೇಶ್ವರಿ ಪಾರ್ಕ್ ಎದುರಿಗೆ, ರಾಣೇಬೆನ್ನೂರು-5.

ಸ್ಥಳ : ರಾಣೇಬೆನ್ನೂರು
ದಿನಾಂಕ : 07.08.2024



WE HAVE ENDLESS CHOICES
FREE COMPUTERIZED EYE TESTING By Qualified Optometrist
Saturday We are Open
SOUTH INDIA OPTICALS
Near Ram & Co Circle, Beside Bank of Baroda, P.J. Extension, Davanagere 08192-231432 • 08192-462073

### ರಾಣೇಬೆನ್ನೂರು ಹೆಚ್ಚುವರಿ ದಿವಾಣಿ ನ್ಯಾಯಾಲಯ & ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯದಲ್ಲಿ

O.S.No. 149/2013

ವಾದಿಯರು : 1) ವಿಮಲಾಕ್ಷ್ಮ ಕೋಂ ವಿರುಪಾಕ್ಷಪ್ಪ ಹಾಗೂ ವಗೈರೆರು. - ವಿರುದ್ಧ-
ಪ್ರತಿವಾದಿಯರು : 1) ರವಿಕುಮಾರ್ ವೀರಭದ್ರಪ್ಪ ತೋಟಪ್ಪನವರ ಮತ್ತು ವಗೈರೆರು

**ಇಸ್ತಿಯಾರ ನಾಮಾ :**

ಮೇಲ್ಕಂಡ ಪ್ರಕರಣದ ಪ್ರತಿವಾದಿ ನಂ. 5) ಮಹದೇವಮ್ಮ ಕೋಂ ಚನ್ನವೀರಪ್ಪ ತೋಟಪ್ಪನವರ ಸಾಕೀನ : ಮಾಳನಾಯಕನಹಳ್ಳಿ ತಾ:ರಾಣೇಬೆನ್ನೂರು ಜಿ:ಹಾವೇರಿ. 6) ಚಂದ್ರಶೇಖರ್ ತಂದೆ ಚನ್ನವೀರಪ್ಪ ತೋಟಪ್ಪನವರ ಸಾಕೀನ : ಮಾಳನಾಯಕನಹಳ್ಳಿ ತಾ: ರಾಣೇಬೆನ್ನೂರು ಜಿ:ಹಾವೇರಿ. 7) ಶಿವಯೋಗಿ ತಂದೆ ಚನ್ನವೀರಪ್ಪ ತೋಟಪ್ಪನವರ ಸಾಕೀನ : ಮಾಳನಾಯಕನಹಳ್ಳಿ ಹಾ:ವ: ಐಟಿಐ ಕಾಲೇಜು ಹಿಂಭಾಗ, ಆಂಜನೇಯ ದೇವಸ್ಥಾನದ ಹತ್ತಿರ, ನಿಟುವಳ್ಳಿ ಹೊಸ ಬಡಾವಣೆ, ದಾವಣಗೆರೆ ಇವರುಗಳು ಸದರಿ ಪ್ರಕರಣದಲ್ಲಿ ಬುಧ್ಯಾಪೂರ್ವಕವಾಗಿ ಕೋರ್ಟಿನಿಂದ ಮತ್ತು ನೋಂದಾಯಿತ ಅಂಚೆ ಮೂಲಕ ಕಳುಹಿಸಿದ ಮಧ್ಯಂತರ ಅರ್ಜಿಯ ನೋಟೀಸು ಮತ್ತು ಸಮನ್ಸ್ ತೆಗೆದುಕೊಂಡಿರುವುದಿಲ್ಲ. ಕಾರಣ ಈ ಮೇಲ್ಕಾಣಿಸಿದ ಪ್ರಕರಣದಲ್ಲಿ 5,6,7ನೇ ಪ್ರತಿವಾದಿಯರಿಗೆ ಹಾಜರಾಗಲು ತಾ: 28.08.2024 ರಂದು ಸದರ ಪ್ರಕರಣದಲ್ಲಿ ಮುದ್ದತ್ತು ನೇಮಿಸಿದ್ದು ಇರುತ್ತದೆ.

ಕಾರಣ ಮೇಲ್ಕಂಡ ಪ್ರಕರಣದಲ್ಲಿ 5,6,7ನೇ ಪ್ರತಿವಾದಿಯರನ್ನು ಸೇರಿಸುವ ಕುರಿತು ತಮ್ಮದು ಯಾವುದೇ ತಕರಾರುಗಳು ಇದ್ದಲ್ಲಿ ಖುದ್ದಾಗಿ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಮಾನ್ಯ ನ್ಯಾಯಾಲಯಕ್ಕೆ ತಾ|| 28.08.2024ರಂದು ಬೆಳಗ್ಗೆ 10.30ಕ್ಕೆ ಹಾಜರಾಗತಕ್ಕದ್ದು. ಇದಕ್ಕೆ ತಪ್ಪಿದ್ದಲ್ಲಿ ಮೇಲ್ಕಂಡ ವಾದಿಯರ ಮಾಗಣಿಗೆ ನಿಮ್ಮದು ಯಾವುದೇ ತಕರಾರು ಇಲ್ಲವೆಂದು ಮಾನ್ಯ ನ್ಯಾಯಾಲಯದವರು ಕಾನೂನು ರೀತ್ಯಾ ಮುಂದಿನ ಕ್ರಮ ಜರುಗಹಿಸುವುದರಲ್ಲಿ ಬರುವುದು ತಿಳಿಯಿರಿ.

ಈ ಹೊತ್ತು ತಾ: 06.08.2024 ರಂದು ಕೋರ್ಟಿನ ಮೊಹರು ಹಾಗೂ ಶೀಲು ಹಾಕಿ ಕೊಡಲ್ಪಟ್ಟಿತು.

ಸ್ಥಳ : ರಾಣೇಬೆನ್ನೂರು.
ದಿನಾಂಕ : 06.08.2024
ವಾದಿಯರ ಪರ ವಕೀಲರು
ಸಹಿ/-ಎಂ.ಕೆ. ಗಂಗನಗೌಡ್ರು, ವಕೀಲರು

ಕೋರ್ಟಿನ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಪ್ರಧಾನ ದಿವಾಣಿ ನ್ಯಾಯಾಲಯ ಮತ್ತು ಜೆಎಂಎಫ್‌ಸಿ, ರಾಣೇಬೆನ್ನೂರು.

### ಘನ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ

**ಅಸಲು ದಾವಾ ನಂ. 311/2014**

**ವಾದಿಗಳು : ರೇವಣಸಿದ್ದಪ್ಪ ಮತ್ತು ಇತರರು ವಿರುದ್ಧ**
**ಪ್ರತಿವಾದಿಗಳು : 1. ಶ್ರೀ ನಾರಾಯಣ ನಾಯ್ಕ - ಪೌತಿ ವಾರಸುದಾರರು**
**1 (ಎ) ನಾಗನಾಯ್ಕ ಮತ್ತು ಇತರರು**
**ಉದ್ದೇಶಿತ ಪ್ರತಿವಾದಿ 7. ಮಂಜು ಬಿನ್ ಜಯಬಾಯಿ, ವಯಸ್ಸು 32 ವರ್ಷ, ಪರಶಾಂಪುರ ಗ್ರಾಮ, ದಾವಣಗೆರೆ ತಾಲ್ಲೂಕು**
**ಉದ್ದೇಶಿತ ಪ್ರತಿವಾದಿ 8 ನಾಗರಾಜ ಬಿನ್ ಓಂಕಾರನಾಯ್ಕ**
**ವಯಸ್ಸು 26 ವರ್ಷ, ಥರಗಾರ ಕೆಲಸ, ತೋಳಹುಣಸೆ ಗ್ರಾಮ, ದಾವಣಗೆರೆ ತಾಲ್ಲೂಕು**

**ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 5ರ ಅಡಿಯಲ್ಲಿ ನೋಟೀಸ್**

ವಾದಿಗಳು ಪ್ರತಿವಾದಿಗಳ ವಿರುದ್ಧ ಅಸಲು ದಾವಾ ನಂ. 311/2014ರ ದಾವೆಯನ್ನು ಸಲ್ಲಿಸಿದ್ದು ಪ್ರತಿವಾದಿಗಳು, ಉದ್ದೇಶಿತ 7 ಮತ್ತು 8ನೇ ಪ್ರತಿವಾದಿಗಳ ವಿರುದ್ಧ ದಾವಾ ಬಿ ಷೆಡ್ಯೂಲ್ ಸೊತ್ತು ವಾದಿಯರ ಮಾಲೀಕತ್ವದ ಮತ್ತು ಶಾಂತಿಯುತ ಸ್ವಾಧೀನಾನುಭವನದಲ್ಲಿರುವ ಪಿತ್ರಾರ್ಜಿತ ಸೊತ್ತೆಂದು ಘೋಷಿಸಲು ಮತ್ತು ವಾದಿಯು ದಾವಾ ಬಿ.ಷೆಡ್ಯೂಲ್ ಸ್ವತ್ತಿನ ಮಾಲೀಕರೆಂದು ಘೋಷಿಸಲು ಮತ್ತು ಇತರೆ ಪರಿಹಾರಗಳನ್ನು ಕೋರಿ ದಾವೆಯನ್ನು ಘನ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ದಾವಣಗೆರೆಯಲ್ಲಿ ಸಲ್ಲಿಸಲಾಗಿದೆ.

ಉದ್ದೇಶಿತ ಪ್ರತಿವಾದಿಗಳಾದ 7 ಮತ್ತು 8ನೇಯವರಾದ ನಿಮಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಮೇಲೆ ಹೇಳಿರುವಂತೆ ಪರಿಹಾರವನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಈಗಾಗಲೇ ನಿಮಗೆ ನ್ಯಾಯಾಲಯದ ಮೂಲಕ, ಅಂಚೆಯ ಮೂಲಕ, ಹ್ಯಾಂಡ್ ನೋಟಿಸ್ ಮೂಲಕ ನೋಟೀಸ್ ಕಳುಹಿಸಿದ್ದರು ಜಾರಿ ಆಗಿರುವುದಿಲ್ಲ. ಆದ್ದರಿಂದ ಸದರಿ ಮೇಲ್ಕಂಡ ದಾವೆಯು ದಿನಾಂಕ 24.08.2024ರಂದು ನಿಮ್ಮಗಳ ಹಾಜರಾತಿಗಾಗಿ ಇರುತ್ತದೆ. ಆದ್ದರಿಂದ ಸದರಿ ದಿನಾಂಕದಂದು ನ್ಯಾಯಾಲಯಕ್ಕೆ ಬೆಳಿಗ್ಗೆ 11 ಗಂಟೆಗೆ ನೀವಾಗಲೀ ನಿಮ್ಮ ಪರ ವಕೀಲರ ಮುಖಾಂತರವಾಗಲೀ ಹಾಜರಾಗತಕ್ಕದ್ದು. ಹಾಜರಾಗಲು ತಪ್ಪಿದಲ್ಲಿ ನಿಮ್ಮಗಳ ಗೈರು ಹಾಜರಿಯಲ್ಲಿ ನಿಮ್ಮಗಳ ವಿರುದ್ಧ ಏಕಪಕ್ಷೀಯವಾಗಿ ದಾವೆಯನ್ನು ತೀರ್ಮಾನಿಸಲಾಗುವುದು.

ಈ ದಿವಸ 07ನೇ ತಾರೀಖು ಆಗಸ್ಟ್ ಮಾಹೆ 2024ನೇ ಇಸವಿಯಂದು ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ನೀಡಿರುತ್ತಾರೆ.

ಸಹಿ/- ಕೆ. ಸೈಯದ್ ಖಾದರ್, ವಕೀಲರು
ಕೆ.ಎಸ್.ಕೆ. ಲಾ ಅಸೋಸಿಯೇಟ್ಸ್, ದಾವಣಗೆರೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು,
1ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕಿರಿಯ ವಿಭಾಗ

## ವಿಮೆ ಕಂತು ರದ್ಧತಿ : ವಿಪಕ್ಷಗಳು ರಾಜ್ಯಗಳ ಮನವೊಲಿಸಲಿ



ನವದೆಹಲಿ, ಆ. 7 - ಜೀವ ಹಾಗೂ ಆರೋಗ್ಯ ವಿಮೆಗಳ ಕಂತುಗಳ ಮೇಲಿನ ಶೇ. 18ರ ಜಿ.ಎಸ್.ಟಿ. ತೆರಿಗೆಯನ್ನು ರದ್ದುಗೊಳಿಸುವ ಕುರಿತು ಪ್ರತಿಪಕ್ಷಗಳು ತಮ್ಮ ಆಡಳಿತ ಇರುವ ರಾಜ್ಯಗಳ ಮನವೊಲಿಸಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಹೇಳಿದ್ದಾರೆ.

ಲೋಕಸಭೆಯಲ್ಲಿ ಹಣಕಾಸು ಮಸೂದೆ ಕುರಿತ ಚರ್ಚೆಯಲ್ಲಿ ಮಾತನಾಡಿದ ಸೀತಾರಾಮನ್, ಕಂತುಗಳ ಮೇಲಿನ ತೆರಿಗೆ ಕಡಿತ ಬಯಸುವವರು ಮೊದಲು ತಮ್ಮ ರಾಜ್ಯಗಳ ಹಣಕಾಸು ಸಚಿವರ ಮನವೊಲಿಸಬೇಕು ಎಂದಿದ್ದಾರೆ.

ಈ ತೆರಿಗೆಯನ್ನು ರದ್ದುಗೊಳಿಸುವ ಶಿಫಾರಸ್ಸುಗಳನ್ನು ಜಿ.ಎಸ್.ಟಿ. ಮಂಡಳಿಗೆ ಕಳಿಸುವ ಉದಾರತೆ ತೋರಬೇಕು. ಕೇವಲ ಸಂಸತ್ತಿನ ಹೊರಗೆ ಪ್ರತಿಭಟನೆ ನಡೆಸಿದರೆ ಸಾಲದು ಎಂದು ಸೀತಾರಾಮನ್ ತಿಳಿಸಿದರು.

ಜಿ.ಎಸ್.ಟಿ. ಜಾರಿಯಾಗುವುದಕ್ಕೆ ಮುಂಚೆಯೂ ವಿಮಾ ಕಂತುಗಳ ಮೇಲೆ ತೆರಿಗೆ ವಿಧಿಸಲಾಗುತ್ತಿತ್ತು. ನಂತರ ಈ ತೆರಿಗೆಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಲಾಗಿದೆ ಎಂದು ಸೀತಾರಾಮನ್ ತಿಳಿಸಿದರು.

ಕಳೆದ ಮೂರು ವರ್ಷಗಳಲ್ಲಿ ಆರೋಗ್ಯ ವಿಮೆಯ ಕಂತುಗಳಿಂದ 24,529 ಕೋಟಿ ರೂ.ಗಳ ತೆರಿಗೆ ಸಂಗ್ರಹಿಸಲಾಗಿದೆ. ಇದರಲ್ಲಿ 12,264 ಕೋಟಿ ರೂ. ನೇರವಾಗಿ ರಾಜ್ಯಗಳಿಗೆ ಹೋಗಿದೆ. ಕೇಂದ್ರ ಪಾಲಿನಲ್ಲಿ ಶೇ.41ರಷ್ಟು ಹಣ ತೆರಿಗೆ ವಿತರಣೆ ರೂಪದಲ್ಲಿ ಮತ್ತೆ ರಾಜ್ಯಗಳಿಗೆ ದೊರೆತಿದೆ ಎಂದು ಸಚಿವೆ ಹೇಳಿದರು.

ಕಂತುಗಳ ಮೇಲಿನ ತೆರಿಗೆ ತೆಗೆದು ಹಾಕುವ ಬಗ್ಗೆ ಜಿಎಸ್‌ಟಿ ಮಂಡಳಿ ನಿರ್ಧರಿಸಬೇಕು. ಆನಂತರವೇ ಸಂಸತ್ತಿನಲ್ಲಿ ತಿದ್ದುಪಡಿ ತರಲು ಸಾಧ್ಯ ಎಂದು ಸೀತಾರಾಮನ್ ಹೇಳಿದರು.

## ಶೇ.30ರಷ್ಟು ಮಾತ್ರ ಗುರಿ ತಲುಪಿದ ಪಿಎಂ - ಕುಸುಮ್ ಯೋಜನೆ

ನವದೆಹಲಿ, ಆ. 7 - ಕೃಷಿಗೆ ಸೌರ ವಿದ್ಯುತ್ ಒದಗಿಸಲು ಉತ್ತೇಜನ ನೀಡುವ ಪಿಎಂ ಕುಸುಮ್ ಯೋಜನೆ ಶೇ. 30ರಷ್ಟು ಮಾತ್ರ ಗುರಿ ತಲುಪಿದೆ ಎಂದು ಇತ್ತೀಚಿನ ವರದಿಯೊಂದು ತಿಳಿಸಿದೆ.

2019ರಲ್ಲಿ ಪ್ರಧಾನಮಂತ್ರಿ ಕಿಸಾನ್ ಊರ್ಜಾ ಏವಂ ಉತ್ಥಾನ ಮಹಾಭಿಯಾನ್ (ಪಿಎಂ ಕುಸುಮ್) ಯೋಜನೆ ಜಾರಿಗೆ ತರಲಾಗಿತ್ತು. ರೈತರು ಸಾಂಪ್ರದಾಯಿಕ ವಿದ್ಯುತ್ ಅವಲಂಬಿಸುವುದನ್ನು ತಪ್ಪಿಸಲು ಈ ಸೌರ ವಿದ್ಯುತ್ ಯೋಜನೆ ಆರಂಭಿಸಲಾಗಿತ್ತು.

ಹರಿಯಾಣ, ಪಂಜಾಬ್, ರಾಜಸ್ಥಾನ ಹಾಗೂ ಛತ್ತೀಸ್‌ಘಡಗಳಲ್ಲಿ ಅಧ್ಯಯನ ನಡೆಸಿ ವರದಿಯೊಂದನ್ನು ರೂಪಿಸಿರುವ ಸೈನ್ಸ್ ಅಂಡ್ ಎನ್ವಿರಾನ್‌ಮೆಂಟ್ ಸಂಸ್ಥೆಯು, ಈ ರಾಜ್ಯಗಳಲ್ಲಿ ಇದುವರೆಗೂ ಶೇ. 30ರಷ್ಟು ಮಾತ್ರ ಗುರಿ ತಲುಪಲು ಸಾಧ್ಯವಾಗಿದೆ ಎಂದು ತಿಳಿಸಿದೆ.

# 'ಮಕ್ಕಳ ಪಂಚಮಿ' ಸರ್ಕಾರದಿಂದಲೇ ಆಚರಿಸಬೇಕು

### 'ಕಲ್ಲು ನಾಗರಕ್ಕೆ ಹಾಕುವ ಹಾಲು ಮಕ್ಕಳ ಪಾಲು' ಸಪ್ತಾಹದಲ್ಲಿ ಜಯಮೃತ್ಯುಂಜಯ ಸ್ವಾಮೀಜಿ

ದಾವಣಗೆರೆ, ಆ. 7- ನಾಗರ ಪಂಚಮಿ ಯನ್ನು 'ಮಕ್ಕಳ ಪಂಚಮಿ'ಯನ್ನಾಗಿ ಸರ್ಕಾರದ ವತಿಯಿಂದಲೇ ಆಚರಿಸುವಂತಾಗಬೇಕು. ಸರ್ಕಾರ ಕೂಡ ಈ ಬಗ್ಗೆ ಚಿಂತನೆ ನಡೆಸ ಬೇಕೆಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಆಶಯ ವ್ಯಕ್ತಪಡಿಸಿದರು.

ನಗರದ ಕೊಂಡಜ್ಜಿ ರಸ್ತೆಯಲ್ಲಿರುವ ಬಿಜೆಎಂ ಹಾಗೂ ಜಿ.ಎನ್.ಬಿ. ಆಂಗ್ಲ ಮಾಧ್ಯಮ ಪ್ರೌಢಶಾಲಾ ಆವರಣದಲ್ಲಿ 2024-25 ನೇ ಸಾಲಿನ ಶಾಲಾ ಸಂಸತ್ ಪದಗ್ರಹಣ ಹಾಗೂ ನಾಗರ ಪಂಚಮಿ ಪ್ರಯುಕ್ತ ಹಮ್ಮಿಕೊಂಡಿದ್ದ 26 ನೇ ವರ್ಷದ 'ಕಲ್ಲು ನಾಗರಕ್ಕೆ ಹಾಕುವ ಹಾಲು ಮಕ್ಕಳ ಪಾಲು' ಎಂಬ ಸಪ್ತಾಹ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ನಾಗರ ಪಂಚಮಿ ದಿನಂದು ನೆಪ ಮಾತ್ರಕ್ಕೆ ಕಲ್ಲು ನಾಗರಕ್ಕೆ ಹಾಕುವ ಹಾಲನ್ನು ಸ್ವಲ್ಪವೇ ಹಾಲನ್ನು ನೈವೇದ್ಯ ಮಾಡಿ, ಉಳಿದದ್ದನ್ನು ದೈವ ಸ್ವರೂಪದ ತಮ್ಮ ಮಕ್ಕಳಿಗೆ, ನೆರೆಹೊರೆಯ ಮಕ್ಕಳಿಗೆ ಅಥವಾ ಅನಾಥ, ಅಂಗವಿಕಲ ಮಕ್ಕಳಿಗೆ, ಕುಷ್ಠರೋಗಿಗಳಿಗೆ ನೀಡಿದರೆ ಪೌಷ್ಠಿಕ ಆಹಾರ ವ್ಯರ್ಥವಾಗುವುದನ್ನು ತಪ್ಪಿಸಿದಂತಾ ಗುತ್ತದೆ ಮತ್ತು ಹಬ್ಬದ ಆಚರಣೆಗೂ ಸಾರ್ಥಕತೆ ಬರುತ್ತದೆ ಎಂದರು.

ನಮ್ಮ ಪೂರ್ವಜರು ಆಯಾ ಕಾಲಮಾನಕ್ಕೆ ಅನುಗುಣವಾಗಿ ಸಾಂಪ್ರದಾಯಿಕವಾಗಿ ಹಬ್ಬಗಳನ್ನು ಆಚರಿಸುತ್ತಾ ಬರುತ್ತಿದ್ದಾರೆ. ಇಡೀ ಪ್ರಕೃತಿ ಹೊಸ ಜೀವ ಕಳೆಯಿಂದ ತುಂಬಿರುತ್ತದೆ ಹಾಗಾಗಿ ಯುಗಾದಿ ಆಚರಿಸ ಲಾಗುತ್ತದೆ. ದೀಪಗಳ ಬೆಳಗಿಸಿ ಕತ್ತಲೆಯಿಂದ ಬೆಳಕಿನೆಡೆಗೆ ಎನ್ನುವ ಸಂದೇಶ ರವಾನೆ ಮಾಡಲು ದೀಪಾವಳಿ ಆಚರಣೆ ಮಾಡಲಾಗುತ್ತದೆ ಎಂದು ಉದಾಹರಿಸಿದರು.

ನಮ್ಮ ಸುತ್ತಮುತ್ತಲೇ ಇರುವ ವಿಷದ ಮನಸ್ಸಿರುವವರನ್ನು ಶುದ್ಧ ಹಾಲಿನಿಂದ ಸ್ವಚ್ಛಗೊಳಿಸುವ ಸಲುವಾಗಿ ನಾಗರ ಪಂಚಮಿ ಹಬ್ಬ ಆಚರಿಸಲಾಗುತ್ತದೆ. ಹಬ್ಬಗಳ ಆಚರ ಣೆಗೂ ವೈಜ್ಞಾನಿಕ ಕಾರಣಗಳಿವೆ. ಅದರೊಟ್ಟಿಗೆ ಮೂಢನಂಬಿಕೆಗಳು ಸಹ ಆಚರಣೆಗೆ ಬಂದವು. ಕಾಲಕ್ರಮೇಣ ಹಬ್ಬಗಳು ಮಾರ್ಪಾಡಾದವು ಎಂದು ಹೇಳಿದರು.

ನಾಡಿನ ಅನೇಕ ನದಿಗಳು ಮೈದುಂಬಿ ಹರಿಯುತ್ತಿದ್ದು, ಈ ವೇಳೆ ಬಾಗಿನ ಅರ್ಪಿಸುವ ಸಂಪ್ರದಾಯ ರೂಢಿಯಲ್ಲಿದೆ. ಆದರೆ ನಾವುಗಳು ವಿನೂತನ ರೀತಿಯಲ್ಲಿ ಬಾಗಿನ ಅರ್ಪಿಸುವ ಕೆಲಸ ಮಾಡುತ್ತಿದ್ದು, ನಾವು ಕೂಡಲ ಸಂಗಮದಲ್ಲಿ ಬೆಲೆ ಬಾಳುವ ಸೀರೆ, ಮೇದಾರ ಹೆಣೆದಿರುವ ಬುಟ್ಟಿ, ಧಾನ್ಯಗಳನ್ನು ನದಿಯಲ್ಲಿ ಬಿಡುವ ಬದಲು ರೈತ ಮಹಿಳಾ ಕಾರ್ಮಿಕರಿಗೆ ಬಾಗಿನ ಅರ್ಪಿಸಿ, ಗೌರವಿಸುವ ಕಾರ್ಯವನ್ನು ಮಾಡುತ್ತಿದ್ದೇವೆ ಎಂದರು.

ಪ್ರತಿ ವರ್ಷ 51 ರೈತ ಮಹಿಳೆಯರಿಗೆ ಬಾಗಿನ ಸಮರ್ಪಣೆ ಮಾಡುತ್ತಿದ್ದು, ದುಬಾರಿ ದರದ ಸೀರೆ, ಬುಟ್ಟಿ, ಧಾನ್ಯಗಳನ್ನು ವ್ಯರ್ಥ ಮಾಡುವುದು ಬೇಡ ಎಂಬ ಸದುದ್ದೇಶದಿಂದ ಈ ರೀತಿ ವಿನೂತನ ಬಾಗಿನ ಅರ್ಪಿಸುತ್ತಿದ್ದೇವೆ ಎಂದು ಹೇಳಿದರು.

ಡಿಡಿಪಿಐ ಜಿ. ಕೊಟ್ರೇಶ್ ಮಕ್ಕಳಿಗೆ ಹಾಲು ಮತ್ತು ಬನ್ ನೀಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಪ್ರಾಥಮಿಕ ಹಂತದಲ್ಲೇ ಪ್ರಜಾಪ್ರಭುತ್ವ ವ್ಯವಸ್ಥೆ ಬಗ್ಗೆ ಮಕ್ಕಳಲ್ಲಿ ಮನದಟ್ಟು ಮಾಡುವ ಮತ್ತು ನಾಯಕತ್ವದ ಗುಣಗಳನ್ನು ಬೆಳೆಸುವ ಉದ್ದೇಶದಿಂದ ಶಾಲಾ ಸಂಸತ್ ಕಾರ್ಯಕ್ರಮ ಆಯೋಜನೆ ಮಾಡಲಾಗುತ್ತದೆ ಎಂದರು.

ವಿದ್ಯಾರ್ಥಿ ದೆಸೆಯಲ್ಲಿಯೇ ಮಕ್ಕಳಲ್ಲಿ ಶಿಸ್ತು, ಸಮಯ ಪ್ರಜ್ಞೆ, ಶಾಂತಿ ಮನೋಭಾವನೆ ಮೂಡಿಸುವ ಕೆಲಸ ಮಾಡಬೇಕಾಗಿದೆ. ಸಂಸತ್ ಭವನದಲ್ಲಿ ನಡೆಯುವ ಚರ್ಚೆಗಳನ್ನು ಶಾಲೆಗಳಲ್ಲಿ ಅಣಕು ಸಂಸತ್ ಕಲಾಪ ನಡೆಸುವ ಮೂಲಕ ಮಾಹಿತಿ ನೀಡಬೇಕೆಂದರು.

ಮೂಢನಂಬಿಕೆಗಳನ್ನು ಮಕ್ಕಳಲ್ಲಿ ಬಿತ್ತದೇ ಹಾಲು ಸದೃಢ ಆರೋಗ್ಯ ಪೂರಕ. ಅತ್ಯಂತ ಪೌಷ್ಠಿಕ ಆಹಾರ. ಆದ್ದರಿಂದ ಕಲ್ಲು ನಾಗರಕ್ಕೆ ಹಾಕಿ ವ್ಯರ್ಥ ಮಾಡದೇ ಮಕ್ಕಳ ಪಾಲಾಗುವಂತೆ ನೋಡಿಕೊಳ್ಳಬೇಕು. ಕಲ್ಲು ನಾಗರಕ್ಕೆ ಸ್ವಲ್ಪ ನೈವೇದ್ಯ ಮಾಡಿ ಉಳಿದ ಹಾಲನ್ನು ಮಕ್ಕಳಿಗೆ ಕೊಡಬೇಕೆಂದು ಕರೆ ನೀಡಿದರು.

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಸದಸ್ಯೆ ವಾಣಿ ಬಕ್ಕೇಶ್, ಮಹಾನಗರ ಪಾಲಿಕೆ ನಾಮನಿರ್ದೇಶಿತ ಸದಸ್ಯ ಎಲ್.ಹೆಚ್. ಸಾಗರ್, ಮುಖಂಡ ಚನ್ನಬಸವನಗೌಡ, ರುದ್ರಮ್ಮ ಮಲ್ಲಿಕಾರ್ಜುನಪ್ಪ, ಕೆ.ಎಲ್.ಇ. ಟ್ರಸ್ಟ್ ಕಾರ್ಯದರ್ಶಿ ಅಗಡಿ ಮಂಜುನಾಥ್, ಜ್ಯೋತಿ ಉಪಾಧ್ಯಾಯ ಮತ್ತಿತರರು ಉಪಸ್ಥಿತರಿದ್ದರು.



### ಸರ್ಕಾರದಿಂದ ಮೀಸಲಾತಿ ಹೋರಾಟ ಹತ್ತಿಕ್ಕುವ ಕೆಲಸ

ದಾವಣಗೆರೆ, ಆ. 7- ಪಂಚಮಸಾಲಿ ಮೀಸಲಾತಿ ಹೋರಾಟವನ್ನು ರಾಜ್ಯ ಸರ್ಕಾರವೇ ಹತ್ತಿಕ್ಕುವ ಕೆಲಸ ಮಾಡುತ್ತಿದೆ ಎಂದು ಕೂಡಲಸಂಗಮದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ದೂರಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಂಚಮಸಾಲಿಗೆ 2 ಎ ಮೀಸಲಾತಿ ನೀಡುವಂತೆ ಒತ್ತಾಯಿಸಿ ಬೆಳಗಾವಿಯಲ್ಲಿ ನಡೆಸಿದ ಹೋರಾಟದ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಮೀಸಲಾತಿ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳಲು ಸಭೆ ಕರೆಯುವುದಾಗಿ ಭರವಸೆ ನೀಡಿದ್ದರು. ಆದರೆ ಇದುವರೆಗೂ ಸಭೆ ಕರೆದಿಲ್ಲ. ಮುಂಗಾರು ಅಧಿವೇಶನದಲ್ಲಿ ಮೀಸಲಾತಿ ವಿಚಾರವಾಗಿ ಚರ್ಚಿಸಲು ಅನುಮತಿ ಕೋರಿ ಪಂಚಮಸಾಲಿ ಸಮಾಜದ 20 ಶಾಸಕರು ಸಭಾಪತಿಗಳಿಗೆ ಮನವಿ ಸಲ್ಲಿಸಿದರೂ ಅನುಮತಿ ನೀಡಲಿಲ್ಲ.

ಅಧಿವೇಶನದ ಅಂತಿಮ ದಿನ ಬಸವನಗೌಡ ಪಾಟೀಲ್ ಯತ್ನಾಳ್ ಅವರಿಗೆ ಅನುಮತಿ ನೀಡಲಾಯಿತಾದರೂ ಅನಿರ್ದಿಷ್ಟಾವಧಿ ಗೆ ಅಧಿವೇಶನ ಮುಂದೂಡಲಾಯಿತು ಎಂದರು.

ಇವೆಲ್ಲಾ ಬೆಳವಣಿಗೆಗಳನ್ನು ಗಮನಿಸಿದರೆ ಸರ್ಕಾರ ಮೀಸಲಾತಿ ಹೋರಾಟ ಹತ್ತಿಕ್ಕುವ ಪ್ರಯತ್ನ ಮಾಡುತ್ತಿದೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ ಎಂದು ಹೇಳಿದರು.

ಸಭಾಪತಿಗಳು ಪಂಚಮಸಾಲಿ ಸಮಾಜದ ಶಾಸಕರಿಗೆ ಅಧಿವೇಶನದಲ್ಲಿ ಚರ್ಚೆಗೆ ಅವಕಾಶ ನೀಡದ ಕಾರಣಕ್ಕೆ ಸಿಎಂ ಸಿದ್ಧರಾಮಯ್ಯ ಅವರನ್ನೇ ನೇರವಾಗಿ ಭೇಟಿ ಮಾಡಿ ಚರ್ಚಿಸುವಂತೆ ಮತ್ತು ಭೇಟಿ ಸಾಧ್ಯವಾಗದಿದ್ದಲ್ಲಿ ನೇರವಾಗಿ ಮೀಸಲಾತಿ ಹೋರಾಟದಲ್ಲಿ ಭಾಗವಹಿಸುವಂತೆ ಸೂಚನೆ ನೀಡಿದ್ದೇವೆ ಎಂದರು.

ಸೆ. 12 ರಂದು ಪಂಚಮಸಾಲಿ ಸಮಾಜದ ವಕೀಲರೊಂದಿಗೆ ಸಭೆ ನಡೆಸಿ ಮುಂದಿನ ಹೋರಾಟದ ರೂಪುರೇಷೆಗಳ ಬಗ್ಗೆ ಚರ್ಚೆ ನಡೆಸಲಾಗುವುದು. ಮೀಸಲಾತಿ ಹೋರಾಟವನ್ನು ಸರ್ಕಾರ ಹತ್ತಿಕ್ಕಲು ಮುಂದಾದರೆ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.



## ವೀರಶೈವ ಮಹಾಸಭಾದಿಂದ ಭದ್ರೆಗೆ ಬಾಗಿನ ಅರ್ಪಣೆ

ದಾವಣಗೆರೆ, ಆ.7- ಅಖಿಲ ಭಾರತ ವೀರಶೈವ - ಲಿಂಗಾಯತ ಮಹಾಸಭಾದ ರಾಜ್ಯ ಯುವ ಘಟಕದ ಉಪಾಧ್ಯಕ್ಷರಾದ ಶ್ರೀನಿವಾಸ್ ಶಿವಗಂಗಾ ಅವರ ನೇತೃತ್ವದಲ್ಲಿ ಇಂದು ಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಿಸಲಾಯಿತು.

ವೀರಶೈವ ಮಹಾಸಭಾದ ದಾವಣಗೆರೆ ತಾಲ್ಲೂಕು ಘಟಕದ ಅಧ್ಯಕ್ಷ ಶಂಭು ಎಸ್. ಉರೇಕೊಂಡಿ, ಕುವೆಂಪು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಜಿ.ಎಸ್. ಶಾಂತಕುಮಾರ್, ಚಂದ್ರು ಕುಂದವಾಡಮಠ, ಮಲ್ಲಿಕಾರ್ಜುನ ಕಟ್ಟಿಮನಿ, ಚನ್ನಪ್ಪ ಗುಮ್ಮನೂರು, ಶಿವಕುಮಾರ್, ಗುರು ಸೋಗಿ, ಅನಿಲ್, ಸುನಿಲ್ ಬಾಗೇವಾಡಿ, ಚಂದ್ರು ಡೋಲಿ, ಕುಮಾರ್ ಶಾಮನೂರು, ರಾಘವೇಂದ್ರ ಗೌಡ, ವಜ್ರ ಸ್ವಾಮಿ, ಅರುಣ್, ರಾಕೇಶ್, ಶ್ರೀಮತಿ ಕಾವ್ಯ, ಶುಭಮಂಗಳ, ದಾವಣಗೆರೆ ಜಿಲ್ಲಾ ಯುವ ಘಟಕದ ಮುಖಂಡರುಗಳಾದ ಶಿವರತನ್, ಜೆ. ಶಿವರಾಜ್, ಅಜಿತ್ ಆಲೂರು, ದರ್ಶನ್ ಶಾಮನೂರು, ಯೋಗೀಶ್, ನವೀನ್, ಅಭಿ, ಶಾಂತ, ಮಂಜುನಾಥ್ ದೊಡ್ಡಮನಿ, ಮಯೂರ್ ಅಕ್ಕಮ್ಮನವರ್ ,ನವೀನ್ ದೇವರಾಜ್, ಈಶ್ವರ್ ಮತ್ತಿತರರು ಬಾಗಿನ ಅರ್ಪಣೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಮಲೇಬೆನ್ನೂರಿನಲ್ಲಿ ಪವಾಡ ಪುರುಷ ಮೂಕಪ್ಪ ಸ್ವಾಮಿಗಳು

ಮಲೇಬೆನ್ನೂರು, ಆ. 7- ಪಟ್ಟಣದ ಹೊರ ವಲಯದಲ್ಲಿರುವ ಶ್ರೀ ಭದ್ರಕಾಳಿ ಸಮೇತ ವೀರಭದ್ರೇಶ್ವರ ದೇವಸ್ಥಾನಕ್ಕೆ ಮಂಗಳವಾರ ಸಂಜೆ ಪವಾಡ ಪುರುಷ ಮೂಕಪ್ಪ ಸ್ವಾಮಿಗಳು ಆಗಮಿಸಿ, ಗರ್ಭಗುಡಿಯಲ್ಲಿ ಪಾದಪೂಜೆ ಮಾಡಿಸಿಕೊಳ್ಳುವ ಮೂಲಕ ಭಕ್ತರ ಗಮನ ಸೆಳೆದರು. ನಂತರ ಭಕ್ತರಿಗೂ ದರ್ಶನಾಶೀರ್ವದ ನೀಡಿದರು. ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಬಿ. ಪಂಚಪ್ಪ, ಉಪಾಧ್ಯಕ್ಷ ಬಿ. ಚಿದಾನಂದಪ್ಪ, ಖಜಾಂಚಿ ಬಿ.ಎನ್. ರುದ್ರೇಶ್, ಬಿ. ಮಲ್ಲಿಕಾರ್ಜುನ್, ಬಿ. ಶಂಭುಲಿಂಗಪ್ಪ, ಬಿ. ನಾಗೇಶ್, ಬಿ. ಉಮಾ ಶಂಕರ್, ಬಿ. ಮಹಾರುದ್ರಪ್ಪ, ಬಿ.ಎನ್. ವೀರೇಶ್, ಬಿ.ಸಿ. ಸತೀಶ್, ಉಪನ್ಯಾಸಕರಾದ ಹೊನ್ನಾಳಿ ಗಂಗಾಧರ್, ಎಸ್.ಎನ್. ಶಂಭುಲಿಂಗಪ್ಪ, ದೇವಸ್ಥಾನದ ಪ್ರಧಾನ ಅರ್ಚಕ ಬೆನಕೇಶ್ ಶಾಸ್ತ್ರಿಗಳು ಸೇರಿದಂತೆ, ನೂರಾರು ಭಕ್ತರು ಈ ವೇಳೆ ಹಾಜರಿದ್ದರು.





## ಬಾಂಗ್ಲಾ : ಸಾಮಾನ್ಯ ಪರಿಸ್ಥಿತಿ ನೆಲೆಗೆ ಹರಸಾಹಸ

### ಕರ್ತವ್ಯಕ್ಕೆ ಪೊಲೀಸರು ಗೈರು, ಬ್ಯಾಂಕ್ ಉನ್ನತರ ರಾಜೀನಾಮೆ, ಹಲವೆಡೆ ಹಿಂಸಾಚಾರ

ಢಾಕಾ, ಆ. 7 - ಶೇಖ್ ಹಸೀನಾ ಸರ್ಕಾರದ ಪದಚ್ಯುತಿಯ ನಂತರ ಬಾಂಗ್ಲಾದೇಶದಲ್ಲಿ ಭದ್ರತಾ ಸಂಸ್ಥೆಗಳಲ್ಲಿ ವ್ಯಾಪಕ ಬದಲಾವಣೆ ಮಾಡಿರುವ ನಡುವೆಯೇ, ದೇಶದ ಹಲವೆಡೆ ಹಿಂಸಾಚಾರ ಭುಗಿಲೆದ್ದಿದೆ.

ಈ ನಡುವೆ ಹೇಳಿಕೆ ನೀಡಿರುವ ಬಾಂಗ್ಲಾದೇಶದ ಹಂಗಾಮಿ ಸರ್ಕಾರದ ನಿಯೋಜಿತ ಮುಖ್ಯಸ್ಥ ಮೊಹಮ್ಮದ್ ಯೂನಸ್, ಎಲ್ಲಾ ರೀತಿಯ ಹಿಂಸೆಗಳಿಂದ ದೂರವಿರಬೇಕು ಹಾಗೂ ಶಾಂತವಾಗಿರಬೇಕು ಎಂದು ಕರೆ ನೀಡಿದ್ದಾರೆ.

ದೇಶದ ಹಲವೆಡೆ ಭದ್ರತಾ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಘಟನೆಗಳು ವರದಿಯಾಗಿವೆ. ಇದು ಪೊಲೀಸರು ತಮ್ಮ ಕರ್ತವ್ಯ ನಿರ್ವಹಿಸಲು ಅಡ್ಡಿ ಯಾಗಿದೆ. ಕಾನೂನು ಸುವ್ಯವಸ್ಥೆ ಕಾಯ್ದುಕೊಳ್ಳುವ ಹಾಗೂ ಸಂಚಾರ ವ್ಯವಸ್ಥೆ ನಿರ್ವಹಣೆಯಿಂದ ಪೊಲೀಸರು ಸತತ ಎರಡನೇ ದಿನ ಗೈರಾಗಿದ್ದಾರೆ.

ಬಾಂಗ್ಲಾದೇಶದ ಸ್ಕೌಟ್ಸ್ ಸೇರಿದಂತೆ ವಿದ್ಯಾರ್ಥಿ ಸಂಘಟನೆಗಳ ಹಲವರು ರಾಜಧಾನಿ ಢಾಕಾದಲ್ಲಿ ಸಂಚಾರ ನಿರ್ವಹಣೆ ಮಾಡುತ್ತಿದ್ದುದು ಕಂಡು ಬಂದಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಪೊಲೀಸ್ ಅಧಿಕಾರಿ ಎ.ಐ.ಜಿ. ಶಹೀದುರ್ ರೆಹಮಾನ್, ಪೊಲೀಸರು ಜನರ ಸ್ನೇಹಿತರಾಗಿದ್ದಾರೆ ಹಾಗೂ



ಸಾರ್ವಜನಿಕರಿಗಾಗಿ ಕಾರ್ಯನಿರ್ವಹಿಸುತ್ತಾರೆ. ಪೊಲೀಸರಿಲ್ಲ ಸಮಾಜ ಊಹಿಸಲು ಸಾಧ್ಯವಿಲ್ಲ. ಹೀಗಾಗಿ ಪೊಲೀಸರು ಗಾಳಿ ಸುದ್ದಿ ಕಡೆಗಣಿಸಿ ಕರ್ತವ್ಯಕ್ಕೆ ಹಾಜರಾಗಬೇಕು ಎಂದು ಕರೆ ನೀಡಿದ್ದಾರೆ.

ಮಂಗಳವಾರದಂದು ದೇಶಾದ್ಯಂತ ಪೊಲೀಸ್ ಠಾಣೆಗಳ ಮೇಲೆ ದಾಳಿಗಳು ನಡೆದ ವರದಿಯಾಗಿತ್ತು. ದಾಳಿಗಳಲ್ಲಿ ಹಲವು ಪೊಲೀಸರು ಮೃತಪಟ್ಟಿದ್ದಾರೆ ಎಂದು ಢಾಕಾ ಟ್ರಿಬ್ಯೂನ್ ಪತ್ರಿಕೆ ವರದಿ ಮಾಡಿದೆ.

ಕಳೆದ ಎರಡು ದಿನಗಳಲ್ಲಿ ಕಾರ್ಖಾನೆಗಳ ಮೇಲೆ ದಾಳಿ ಹಾಗೂ ಲೂಟಿಗಳು ನಡೆದಿವೆ. ಉತ್ಪಾದನಾ ಘಟಕಗಳ ರಕ್ಷಣೆಗಾಗಿ ಕಾನೂನು ವ್ಯವಸ್ಥೆಯನ್ನು ಶೀಘ್ರದಲ್ಲೇ ನೆಲೆಗೊಳಿಸಬೇಕು ಎಂದು ಉದ್ಯಮ ವಲಯ ಒತ್ತಾಯಿಸಿದೆ.


ಬಾಂಗ್ಲಾದೇಶ ಬ್ಯಾಂಕ್‌ನಲ್ಲೂ ಸಮಸ್ಯೆ ಭುಗಿಲೆದ್ದಿದೆ. ಬಾಂಗ್ಲಾದೇಶ್ ಬ್ಯಾಂಕ್ ಉಪ ಗವರ್ನರ್ ಖಾಜಿ ಸಯೀದುರ್ ರೆಹಮಾನ್ ಸೇರಿದಂತೆ ಆರು ಉನ್ನತ ಅಧಿಕಾರಿಗಳು ರಾಜೀನಾಮೆ ನೀಡಿದ್ದಾರೆ.

ಬಾಂಗ್ಲಾದೇಶ್ ಬ್ಯಾಂಕ್‌ನ ನೂರಾರು ಅಧಿಕಾರಿಗಳು ಬ್ಯಾಂಕ್ ಗವರ್ನರ್ ಕಚೇರಿಗೆ ನುಗ್ಗಿದ್ದಾರೆ. ಬ್ಯಾಂಕ್ ಲೂಟಿ ಮಾಡುತ್ತಿರುವವರಿಗೆ ಉನ್ನತ ಅಧಿಕಾರಿಗಳು ನೆರವಾಗಿದ್ದಾರೆ ಎಂದು ಆರೋಪಿಸಿದ್ದಾರೆ. ಇದರಿಂದಾಗಿ ಹಲವು ಉಪ ಗವರ್ನರ್‌ಗಳು ಬ್ಯಾಂಕ್ ತೊರೆದಿದ್ದಾರೆ.

ಬಾಂಗ್ಲಾದೇಶದ ಹಲವೆಡೆ ಅಲ್ಪಸಂಖ್ಯಾತ ಹಿಂದೂ ಸಮುದಾಯದವರ ಮೇಲೆ ದಾಳಿ ನಡೆದಿದೆ. ಜನಪ್ರಿಯ ಜಾನಪದ ಗಾಯನ ತಂಡ ವಾದ ಜೋಲರ್ ಗಾನ್ ಪ್ರಮುಖರಾದ ರಾಹುಲ್ ಆನಂದ ಅವರ ನಿವಾಸದ ಮೇಲೆ ದಾಳಿ ನಡೆಸ ಲಾಗಿದೆ. ಅವರ ಮನೆಯಲ್ಲಿದ್ದ ಸಾವಿರಾರು ಸಂಗೀತ ವಾದ್ಯಗಳನ್ನು ಲೂಟಿ ಮಾಡಲಾಗಿದೆ. ರಾಹುಲ್ ಆನಂದ ಅವರು ಗುಪ್ತ ತಾಣದಲ್ಲಿ ಅಡಗಿಕೊಂಡಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಬಾಂಗ್ಲಾದೇಶದ ಸೈನ್ಯದ ಮುಖ್ಯಸ್ಥ ವಕಾರ್ ಉಜ್ ಜಮಾನ್, ಮೊಹಮ್ಮದ್ ಯೂನಸ್ ಅವರು ಗುರುವಾರ ಹಂಗಾಮಿ ಸರ್ಕಾರದ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ.

## ಹೊಳಲ್ಕೆರೆಯಲ್ಲಿ ಇಂದು ಮಲ್ಲಿಕಾರ್ಜುನ ಶ್ರೀ ಸ್ಮರಣೆ



ಚಿತ್ರದುರ್ಗ ಮುರುಘಾ ಮಠದ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಮಹಾಸ್ವಾಮಿಗಳವರ 30 ನೇ ಸ್ಮರಣೋತ್ಸವ ಹಾಗೂ 'ಚಿನ್ಮೂಲಾದ್ರಿ ಚಿತ್ಕಳೆ' ಗ್ರಂಥ ಲೋಕಾರ್ಪಣೆ ಸಮಾರಂಭವು ಇಂದು ಬೆಳಿಗ್ಗೆ 10 ಗಂಟೆಗೆ ಹೊಳಲ್ಕೆರೆ ಒಂಟಿಕಂಬದ ಮುರುಘಾ ಮಠದಲ್ಲಿ ನಡೆಯಲಿದೆ.

## ನಗರದಲ್ಲಿ ಇಂದು ಬಸವ ಪಂಚಮಿ

ಶ್ರೀ ಮುರುಘರಾಜೇಂದ್ರ ವಿರಕ್ತಮಠ, ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ವತಿಯಿಂದ ಹಾಲು ಕುಡಿಸುವ ಹಬ್ಬ - ಬಸವಪಂಚಮಿ ಕಾರ್ಯಕ್ರಮವನ್ನು ನಗರದ ದೊಡ್ಡಪೇಟೆ ವಿರಕ್ತಮಠ, ಬಸವ ಕೇಂದ್ರದಲ್ಲಿ ಇಂದು ಸಂಜೆ 4ಕ್ಕೆ ಹಮ್ಮಿಕೊಳ್ಳಲಾಗಿದೆ.

ಡಾ. ಶ್ರೀ ಬಸವಪ್ರಭು ಸ್ವಾಮೀಜಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಶ್ರೀ ಬಸವಲಿಂಗಮೂರ್ತಿ ಸ್ವಾಮೀಜಿ ಕಾರ್ಯ ಕ್ರಮದ ಸಾನ್ನಿಧ್ಯ ವಹಿಸುವರು. ದಾವಣಗೆರೆ-ಹರಿಹರ ನಗಾರಭಿವೃದ್ಧಿ ಪ್ರಾಧಿಕಾರದ ನೂತನ ಸದಸ್ಯರಾದ ಶ್ರೀಮತಿ ವಾಣಿ ಬಕ್ಕೇಶ ಕಾರ್ಯಕ್ರಮ ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಸಹ ಕಾರ್ಯದರ್ಶಿ ಎಸ್. ಓಂಕಾರಪ್ಪ, ಉಪಾಧ್ಯಕ್ಷ ಹಾಸಬಾವಿ ಕರಿಬಸಪ್ಪ, ಸದಸ್ಯ ವೀರೇಂದ್ರ ಟಿ.ಎಂ., ಲಂಬಿ ಮುರುಗೇಶಪ್ಪ, ಮಹಿಳಾ ಬಸವ ಕೇಂದ್ರದ ಅಧ್ಯಕ್ಷರಾದ ಶ್ರೀಮತಿ ಮಹಾದೇವಮ್ಮ ಭಾಗವಹಿಸುವರು.

## ನೀರಿನ ಕೊರತೆ ನೀಗಿಸಲು ಹಸಿ ಮತ್ತು ಒಣಗಿಸುವ ಪದ್ಧತಿ ಸೂಕ್ತ

### ಬೇಸಾಯ ತಜ್ಞ ಮಲ್ಲಿಕಾರ್ಜುನ್



ದಾವಣಗೆರೆ, ಆ.7- ಭತ್ತದ ಬೆಳೆಯಲ್ಲಿ ನೀರಿನ ಬಳಕೆ ಉಳಿತಾಯ ಮಾಡಲು ಪರ್ಯಾಯವಾದ ಹಸಿ ಮತ್ತು ಒಣಗಿಸುವ ಪದ್ಧತಿ ಅಳವಡಿಸಿಕೊಳ್ಳಬಹುದು ಎಂದು ಬೇಸಾಯ ತಜ್ಞ ಬಿ.ಓ. ಮಲ್ಲಿಕಾರ್ಜುನ್ ರೈತರಿಗೆ ತಿಳಿಸಿದರು.

ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಿಂದ ನಗರದ ಹೊರವಲಯದಲ್ಲಿನ ಹಳೇಬಾತಿ ಗ್ರಾಮದಲ್ಲಿ ಭತ್ತದ ಬೆಳೆಗೆ ಪರ್ಯಾಯ ಹಸಿ ಮಾಡುವಿಕೆ ಮತ್ತು ಒಣಗಿಸುವಿಕೆ ಪದ್ಧತಿಯ ಮುಂಚೂಣಿ ಪ್ರಾತ್ಯಕ್ಷಿಕೆ ತೋರಿಸಿ ಮಾತನಾಡಿದರು.

1 ಎಕರೆ ಪ್ರದೇಶದಲ್ಲಿ ಭತ್ತ ಬೆಳೆಯಲು ಸುಮಾರು 1100 ಎಂಎಂ ಪ್ರಮಾಣದ ನೀರು ಬೇಕಾಗಲಿದೆ. ಆದರೆ ನೀರಿನ ಉಳಿತಾಯ ಮಾಡುವ ಪರ್ಯಾಯ ಹಸಿ ಮತ್ತು ಒಣಗಿಸುವ ಪದ್ಧತಿ ಅಳವಡಿಸಿಕೊಳ್ಳುವುದರಿಂದ ಶೇ.30ರಷ್ಟು ನೀರನ್ನು ಉಳಿತಾಯ ಮಾಡಬಹುದು ಎಂದು ಹೇಳಿದರು.

> **ಯಾಂತ್ರೀಕೃತ ಭತ್ತದ ನಾಟಿ ಮಾಡುವುದರಿಂದ ಕೂಲಿ ಉಳಿತಾಯದ ಜತೆಗೆ ಭತ್ತದ ಇಳುವರಿ ಹೆಚ್ಚಾಗಲಿದೆ.**
> **- ಶ್ರೀಧರ್ ಮೂರ್ತಿ**
> ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕ

ಸರಳ ಮತ್ತು ಸುಲಭವಾದ 30 ಸೆಂ.ಮೀ ಉದ್ದದ ಪಿವಿಸಿ ಪೈಪ್ ತೆಗೆದುಕೊಂಡು ಮೇಲಿನ 10 ಸೆಂ.ಮೀ ಬಿಟ್ಟು, 20 ಸೆಂ.ಮೀ ಸುತ್ತಲೂ ಚಿಕ್ಕ-ಚಿಕ್ಕ ರಂಧ್ರಗಳನ್ನು ಮಾಡಬೇಕು. ನಂತರ ಪೈಪನ್ನು ಭೂಮಿ ಒಳಗೆ ಹಾಕಬೇಕು ಎಂದರು. ಭೂಮಿಯ ಮೇಲ್ಭಾಗದಲ್ಲಿ 10 ಸೆಂ.ಮೀ ಪೈಪ್ ಕಾಣಬೇಕು. ಪೈಪಿನ ನೀರಿನ ಮಟ್ಟ 15 ಸೆಂ.ಮೀ ಗಿಂತ ಕಡಿಮೆಯಾದಲ್ಲಿ ಭತ್ತಕ್ಕೆ ನೀರನ್ನು ಕೊಡಬೇಕು ಎಂದು ಮಾಹಿತಿ ನೀಡಿದರು. ಗದ್ದೆಯಲ್ಲಿ ನಿರಂತರ ವಾಗಿ ನೀರು ನಿಲ್ಲುವುದರಿಂದ ಮೀಥೇನ್ ಉತ್ಪತ್ತಿ ಆಗುವುದನ್ನು ಈ ಪದ್ಧತಿಯಿಂದ ತಡೆಯಬಹುದು ಎಂದು ವಿವರಿಸಿದರು.

ಭತ್ತವು ಪ್ರಮುಖ ಆಹಾರ ಬೆಳೆಯಾಗಿದೆ. ಈ ಬೆಳೆಯ ಉತ್ಪಾದನೆ ವೆಚ್ಚ ಕಡಿಮೆ ಮಾಡುವ ನಿಟ್ಟಿನಲ್ಲಿ ಅನೇಕ ಪದ್ಧತಿಗಳನ್ನು ಭತ್ತದ ಬೆಳೆಯಲ್ಲಿ ಅಳವಡಿಸಿಕೊಳ್ಳಲಾಗಿದೆ ಎಂದು ಕೇಂದ್ರದ ಮುಖ್ಯಸ್ಥ ಡಾ. ದೇವರಾಜ್ ತಿಳಿಸಿದರು.

ಈ ವೇಳೆ ಪ್ರಗತಿಪರ ರೈತರಾದ ಮಲ್ಲಿಕಾರ್ಜುನಪ್ಪ, ಶಂಕರ್, ನಾಗರಾಜ್ ಮತ್ತು ಗ್ರಾಮಸ್ಥರು ಇದ್ದರು.


## ಅಭಿನಂದನೆಗಳು



ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ. ವೆಂಕಟರಾವ್ ಎಂ.ಪಲಾಟೆ** ಹಾಗೂ ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕರಾದ **ಡಾ. ಅಶೋಕ್ ಕುಮಾರ್ ವೀ ಪಾಳೇದ್**, ಇವರುಗಳ ಮಾರ್ಗದರ್ಶನದಲ್ಲಿ 'ಎ ಹಿಸ್ಟಾರಿಕಲ್ ಸ್ಟಡಿ ಆಫ್ ಬ್ಯಾಕ್ವರ್ಡ್ ಕ್ಲಾಸಸ್ ಮುವ್ಮೆಂಟ್ ಇನ್ ಕರ್ನಾಟಕ: ಚಾಲೆಂಜಸ್ ಅಂಡ್ ಇಂಪ್ಯಾಕ್ಟ್' ವಿಷಯದ ಮೇಲೆ ಮಂಡಿಸಿದ ಮಹಾಪ್ರಬಂಧಕ್ಕೆ

**ಚಂದ್ರಶೇಖರ ಎಂ.ಕೆ.**, ಸಹಾಯಕ ಪ್ರಾಧ್ಯಾಪಕರು, ಬಿ.ಎ.ಜೆ.ಎಸ್.ಎಸ್. ಮಹಿಳಾ ಮಹಾವಿದ್ಯಾಲಯ, ರಾಣೇಬೆನ್ನೂರು ಇವರು ದಾವಣಗೆರೆ ವಿಶ್ವವಿದ್ಯಾನಿಲಯದಿಂದ ಪಿಹೆಚ್.ಡಿ. ಪದವಿಯನ್ನು ಪಡೆದಿರುತ್ತಾರೆ.

ಡಾ. ಚಂದ್ರಶೇಖರ ಎಂ.ಕೆ., ರವರು ಹೊನ್ನಾಳಿ ತಾಲ್ಲೂಕು ಯಕ್ಕನಹಳ್ಳಿ ಗ್ರಾಮದ ಶ್ರೀ ಕರಿಬಸಪ್ಪ ಎಂ., ಮಾಜಿ ಉಪಾಧ್ಯಕ್ಷರು, ಗ್ರಾಮ ಪಂಚಾಯಿತಿ, ಯಕ್ಕನಹಳ್ಳಿ ಮತ್ತು ಶ್ರೀಮತಿ ಯಶೋಧಮ್ಮ ಇವರ ಪುತ್ರ.

ಪಿಹೆಚ್.ಡಿ. ಪದವಿಗೆ ಭಾಜನರಾದ ಡಾ. ಚಂದ್ರಶೇಖರ ಎಂ.ಕೆ., ರವರಿಗೆ ಅಭಿನಂದನೆ ಸಲ್ಲಿಸುತ್ತಿರುವ ಆತ್ಮೀಯ ಸ್ನೇಹಿತರು

**ಡಾ. ಚೇತನ್ ಕುಮಾರ್ ಕೆ.ಎಂ.**, ಸಹಾಯಕ ಪ್ರಾಧ್ಯಾಪಕರು
ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ,
ದಾವಣಗೆರೆ ವಿಶ್ವವಿದ್ಯಾನಿಲಯ

**ಡಾ. ಮರುಳಸಿದ್ದಪ್ಪ ಎನ್.ಟಿ.**,
ಸಹಾಯಕ ಪ್ರಾಧ್ಯಾಪಕರು
ಟಿ.ಎಂ.ಎ.ಇ.ಎಸ್. ಶಿಕ್ಷಣ ಮಹಾವಿದ್ಯಾಲಯ, ಹರಪನಹಳ್ಳಿ

**ಶ್ರೀ ಸುನೀಲ್ ಕುಮಾರ್ ಎಸ್.ಜಿ.** ಉಪ ಪ್ರಾಚಾರ್ಯರು,
ವಿಶ್ವಚೇತನ ವಿದ್ಯಾನಿಕೇತನ ಪದವಿಪೂರ್ವ ಕಾಲೇಜು, ದಾವಣಗೆರೆ

**ಡಾ. ಆಶಾ ಜಿ.ಹೆಚ್.** ಪ್ರಾಚಾರ್ಯರು,
ಕೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ.


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas